SRI M. S. KRISHNAN : Is it after the death of the people? Let the Minister go and see the place. He will shed tears.

MR. DEPUTY SPEAKER : If it had come earlier some thing could have been done. Let not the Hon. member be under the impression that if he gives notice of something, he can flare up here; it is highly objectionable. We are also human beings and not madeup of wood.

SRI M. S. KRISHNAN : If he does not make the statement, let him take the responsibility.

MR. DEPUTY SPEAKER : The Minister will make a statement if it is necessary.

SRI M. S. KRISHNAN : When ?

SRI H. M. CHANNABASAPPA. As early as possible after it comes to the Government.

SCARCITY OF DRINKING WATER IN TUMKUR DISTRICT

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು) :....ಸ್ವಾಮಿ, ನಮ್ಮ ಜಿಲ್ಲೆಯಲ್ಲಿ ಜಲಕ್ಷಾಮವಾಗಿ ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ ಮತ್ತು ದನಕರುಗಳಿಗೂ ಕೂಡ ಕುಡಿಯುವುದಕ್ಕೆ ನೀರು ಇಲ್ಲ. ಆದುದರಿಂದ ಈ ಬಗ್ಗೆ 6 ದಿವಸದ ಹಿಂದೆ ಒಂದು ಕಾಲಿಂಗ್ ಅಟೆನ್ಷನ್ ನೋಟೀಸ್ ಕಳುಹಿಸಿದ್ದೇನೆ. ಈ ಬಗ್ಗೆ ನಮಗೇನೂ ಸರ್ಕಾರದಿಂದ ಸ್ಟೇಟ್‌ಮೆಂಟ್ ಬೇಕಾಗಿಲ್ಲ, ಇದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಸರ್ಕಾರದವರು ತೆಗೆದುಕೊಂಡರೆ ಅಷ್ಟೇ ಸಾಕು.

SRI H. SIDDAVEERAPPA. I will make a statement about it early.

MOTION OF THANKS TO THE GOVERNORS ADDRESS DEBATE CONTINUED

‡Sri R. DAYANAND SAGAR(Chamrajapet).—Mr. Deputy Speaker, Sir, at the very outset I request you to give me

(Sri R. Dayanand Sagar)

some reasonable time because I have had no opportunity for the last two years to speak in this House.

The Governor's address is significant for the Hon. Governor opening his address in Kannada language and ending the same in Kannada language. This only goes to show how much even our Governor whose mother tongue is not Kannada has come forward to speak in the language of the State. That only shows the amount of interest the Governor and the State Government has in developing this language, the most beloved language of ours. In the address it is stated that a Directorate of Languages has been established to translate the Central and State Acts and the action of the directorate almost stops at that.

Sir, it is now 27 years running that we have had freedom in this country and now we have thought that we should develop our own languages. But, even at this stage the Governor has got only to say that he has appointed a Directorate of Languages only to translate the State Acts and the Central Acts. The Governor goes on to say that 10 colleges the medium of instruction is Kannada and about 1800 students are in the P.U.C. and about 500 students are in the Degree classes learning their subjects through the medium of Kannada. I ask you, is that enough to develop Kannada? Language is power; language is the most powerful thing through which our students get educated, our studenos become scientists and men who produce wealth and prosperity in this country. What is the fate of those students whom you are asking to learn in Kannada language but who have not sufficient text books either in science or technology or medicine? What are we going to do with those students? Are we murdering them or nurturing them to save this nation? I have told you that we have had 27 years of freedom. We did not build our libraries, we did not encourage authors to bring about original books in science and technology. This is an automic age; this scientific age; this is the sputnik age.

The world has far advanced and far ahead and we are now having a Directorate to translate the State Acts and Central Acts ? For what purpose ? We have got terrific problems in front of us. The food problem is staring us ; prices are soaring high ; production is going lesser and lesser year after year. We are facing difficulties. What are we aiming at ? What are we planning and what are we trying to do ? If you want to develop Kannada, I want you to enrich the libraries of our schools and colleges with sufficient text books. Let the doctors produced in the medical colleges be full fledged doctors who have the knowledge of latest discoveries or researches done in any part of the world. I have had the opportunity of visiting Tokyo and Japan. The Japanese did not learn science and technology in English or French. They learnt it in their own Japanese language. How have they developed ? In Japanese language you have got every textbook, reference books and other advanced books on technology. That is what I want our Government to do.

We have been discussing about the Maharashtra and Karnataka border. According to me there is no Maharashtra and Karnataka border dispute at all at this hour. We have solved it. Automatically it has been solved. The Maharashtrians wanted a Single Man Commission to be appointed. We were not inquisitive for a single commission to be appointed. When the Mahajan Commission was appointed and it gave a report, the Maharashtrians did not want it. Well, very well, if they don't want it, we too don't want it. The matter stands at that. It reminds me of the story in the epics. We had in our epics a great *R*ishi by name Viswamitra. He was engaged in the agelong 'tapas'. At that time, Menaka the most enchanting damsel came about dancing and this *R*ishi forgot for a while his 'tapas'. Attracted by the enchanting lady had her to his heart's content. The result was, Shakuntala was born and Viswamitra then said, 'nay, this is not my child'. Simllarly, the

(Sri R. Dayanand Sagar)

Maharashtrians after having given birth to the Mahajan Report now say "nay, we are not for it". Sir, just as Viswamitra lost his agelong tapas by accepting Menaka. the Maharashtrians have lost their tapas, namely, the public opinion. They cannot now come forward and say, we do not want the Mahajan Commission Report. We want another commission. Let our Government tell Maharashtra Government and the Central Government first and last that either, they shall accept the report or there cannot be another commission Even now I will advise Sri Naik of the Maharashtra Governm nt, if he wants it let him take the Mahajan report and if he does not want it, he should never open his mouth. I would like to speak a word or two about the attrocities the Maharashtrians committed against the Kannadigas in Bombay, Poona and other parts of Maharashtra. Sir, there was arson, loot and defamation of our womenfolk. Have you ever heard that our women have been stripped of their saris and driven out of borders of Maharashtra? I was one of those persons of Karnataka who saw helplessly when the Maharashtrians stripped of saris of our womenfolk and drove them to Karnataka. I am ready to lead the 3 crores of Kannadigas against the Maharashtra and see that Maharashtra is wiped out of the map of India. But we realise that Maharashtra and Karnataka are two sister States of the same country. I want the Maharashtrians to realise that. I want the Central Government to understand that. Coming to the subject of those unfortunate Kannada people who have lost crores of rupees due to looting of shops and houses, I urge upon the Central Government to come to the aid of those people and see that the loss is fully recovered from out of the Maharashtra Government budget to help those victims. Otherwise, we will have no other means except to start an agitation to see that justice is done to the people of Karnataka. Sir, Bombay is a cosmopolitan city; it is a great city; in which the minority population of every part of India life. I urge

upon the Central Government to declare Bombay as the centrally administered State and take that city away from the clutches of Maharashtrians and Shiva Sena people.

SRI B. B. SAYANAK : That is your only demand ? May I ask the Hon. Member Mr. Sagar about the atrocities that were committed in Karnataka against Marathi women ? One marathi lady was made naked.

SRI KONANDUR LINGAPPA : Do you know of atrocities committed in Kolhapur ?

MR DEPUTY SPEAKER: The Hon. Members need not be touchy about it. The Hon. Leader of Opposition has already cited some instances about the atrocities committed both here and there in Maharashtra.

3-30 P. M.

SRI R. DAYANANDA SAGAR : Sir, my right Hon. friend Sri Deve Gowda the leader of Opposition has been making scathing attack on our esteemed Prime Minister Smt. Indira Gandhi. There is a kannada saying which runs thus : "ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರು" ಎಂದು. Sir, if somebody makes a mistake somewhere in the country what is the point in our Hon. Leader of opposition attacking the Prime Minister. He has spent more than 3/4th of his time in his speech attacking our Prime Minister. Smt. Indira Gandhi, our esteemed Prime Minister is not only the leader of the Congress party ; to-day she is the leader of the Nation. She is one of the Leaders of the world ; there is so much of esteem, honour dignity attached to our Nation because of this one and the only lady who is one of the greatest leaders in India has ever produced. We are proud to see such a leader in the comety of nations. To such a lady to attribute all sorts of motive is not good. In my opinion she is the Arch of India. There is a new orientation in

(Sri R. Dayanand Sagar)

the thinking of the world; she has after a revolution—a bloodless socialist revolution which is in process and people who have no eyes to see and people who have no ears to hear cannot appreciate the greatness of her revolutionary changes—brought in revolutionary changes and has incorporated them in the policies and programmes of the Congress party. I may tell the Hon. Members of the opposition who have been attacking the Congress organisation, now and then, in so many ways, firmly that congress is the only organisation which can ever deliver goods to the people of this country. If the Congress fails Nation may fail; If the congress fails democracy may fail; but the Congress will never fail. It has been holding the sway in the nation for decades and it has very successfully gone ahead. If there are any blocks here and there we will remove them and the Congress shall forge ahead with dignity and admiration.

SRI KONANDUR LINGAPPA: Yes, it should forget ahead with taxes.

SRI R. DAYANANDA SAGAR: Ofcourse, you cannot rule out any Government without taxes. Taxes are necessary for bringing in socialism and a new order which you and I will all welcome.

SRI M. S. KRISHNAN: I would like to ask the Hon. member whether the taxes have to be on poor people or on rich people in order to bring in socialism?

SRI R. DAYANANDA SAGAR: My Hon friend from CPI is also pulling on with us in our policies and programmes and he knows it.

SRI M. S. KRISHNAN: With due respect to the Hon. Member Mr. Sagar I may say that whatever things are

done in the interest of the people we accept it. But if things go against the people we oppose it and for the recent budget of the Central Government we are totally opposed to it since it is going to effect the people. But now there seems to be some sort of honeymoon going on between two congresses.

SRI D. DEVARAJ URS.—The Hon. Member seems to be the affected lover.

SRI M. S. KRISHNAN.—We do not care for anything.

SRI R. DAYANAND SAGAR.—Sir, many opposition members attacked us saying that we have not fulfilled our promises. Has not this Government nationalised the scheduled Banks? Have we not wiped out the Rajas and Princes from out of this country? The revolutionary land reforms is a feather on the cap of the Congress Government. It is the most revolutionary, progressive, socialistic reform that has been for the first time brought into effect and it is indeed a feather on the cap of this Government also The Urban ceiling is yet to come and many more programmes and policies are being implemented day after day Sir Rome cannot be built in a day. Bringing in of social and economic changes in a gutless way takes time; It is something if you achieve revolutionary changes By blood revolution the next day you can have a new order. It is possible. But the way of approach we have adopted is democratic socialism and things are to be changed by convincing the people of this country. Therefore it takes time to achieve our objects and fulfill the promises made to the people would never get disturbed.

Sir, I was here when another right Hon. Member Sri Puttaswamaiah was making a scathing attack on one of our Ministers. He said that one of the Ministers runs a 'Rayara office, a 'Madam's office and a 'Chota Saheb's

(Sri R. Dayanand Sagar)

office'. This kind of vague attacks are not welcome. Nobody would appreciate any individual member or members making attacks which have no base or which are not supported by facts and evidences. This way they will not be able to help anybody to go ahead with their work. He also alleged that there was a bribary worth Rs. 2 lakhs; etc. The Congress has promised, the Congress has pledged that they are going to give a clean Government and I am one of those who believe in it firmly. I am not going to talk keeping anybody in view. If a Minister is corrupt he will go. Congress stands for purity of administraton. It is committed to its policies and programmes and it shall go on for that purpose. and that no opposition can ever make an allegation.

Sir, in this House and in the other House, a reference was made to the Sandur speech supposed to have been made by our Hon'ble Leader and that speech being reported in Newspapers. I have also read that speech. That is a most derogatory speech anybody could make that affects the selfrespect and dignity of a Congress member. But our Leader himself came forward and said that it is not a correct report. In the event of the author himself denying such a speech being made and the Newspapers have gone ahead printing unauthorised and wrong statements, Sir, my friends and I are now attempting to launch cases of defarmation against the News papers who were responsible to mislead and misquote the speech and create defarmation and degradation to the members of the Congress party. There are two actions available, (1) criminal and (2) a civil action for damage. We are going ahead to sue the Newspapers concerned for making a most derogatory statement in the Press and bringing the Congress members down in the eyes of the public.

SRI KONANDUR LINGAPPA:—The Hon. member can move a privilege motion here itself !

SRI R. DAYANAND SAGAR:--We will do it at the appropriate time; please leave it to us. We have been following many socialistic policies in our State and in the country. Sir, I have a constructive suggestion to make with regard to the film Industry. The industry, in the State and in this country, is flourishing, and in this industry there are two classes of people who are exploiting the society. The film distributors exploit even the producers and the exhibitors make a very heavy unearned income. Here in the City of Bangalore, Cinema house owners charge a rental upto Rs. 12,000 to Rs. 14,000 per week. This is the biggest exploitation, and I would suggest our Government to bring in a legislation to nationalise film distribution and film exhibition in our State.

Sir, there is a reference about food in the Hon'ble Governor's Address. Last year and in the previous year we had some difficulties about food. During 1973—74 we had good monsoons and foodgrains are properly grown and there are plenty of foodgrains. Yet, foodgrains are not available at reasonable prices. We have the food policy, i. e., a ban on the inter-district movement of foodgrains, I know what is happening. Foodgrains are moving some how or the other from one district to another, but it has got to pass through the Police Officers and this is enriching the policemen who are at the borders. The merchant who stealthily moves foodgrains from one district to another has to pay the contingencies in-between and when he sells it in another district he sells at a higher rate. These are the reasons for high prices of foodgrains inspite of the fact that we have had very good growth of foodgrains. During last monsoons, I had the occasion of going round the State, both in the old Mysore area, Bombay-Karnatak and Hyderabad-Karnatak areas and saw that sufficient and good food crops were being grown. Yet, the difficulty is there. Now it is for our Government to reconsider their policy of removing the ban on the movement of foodgrains from one district to another.

(Sri R. Dayanand Sagar)

The fertilizer scarcity is chasing every farmer, small or big, in the State and in the country. In the 27 years of our rule, we have not been able to plan properly to produce enough fertilizers. This lacuna is not a pardonable one. We must now on a war-footing see that fertilizer factories come up forthwith and sufficient fertilizers are produced. As a matter of fact, you have got to take up food production on a warfooting. What would you do when the enemy attacks you? You forget everything and concentrate your energies to fight the enemy. Today our real enemy is the food. Because the food is not sufficient, the other prices are going high and we are becoming helpless. Therefore I urge upon our Government to take up the food production and the production of fertiliser on a warfooting. Thank you very much sir.

*ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ): ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಗವರ್ನರ್ ಭಾಷಣದ ಮೇಲೆ ವಂದನಾ ನಿರ್ಣಯವನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ.

ಮಾನ್ಯ ಗವರ್ನರ್‌ರವರು ಎರಡನೆಯ ಪ್ಯಾರಾದಲ್ಲಿ "ಹಿಂದಿನ ವರ್ಷ ನಮ್ಮ ಸರ್ಕಾರದವರು ಜನತೆಯ ನಾನಾ ಪಂಗಡಗಳ ಆರ್ಥಿಕ ತಾರಾತಮ್ಯಗಳನ್ನು ತೊಲಗಿಸಿ, ಪ್ರಾದೇಶಿಕ ಅಸಮಾತೆಗಳನ್ನು ತಗ್ಗಿಸಿ, ಒಟ್ಟು ಜನ ಸಮುದಾಯದ ಅಬಿವೃದ್ಧಿ ಹಾಗೂ ಕಲ್ಯಾಣದ ಬಗ್ಗೆ ಬೇಕಾದ ಹಂದರವು ತ್ವರಿತವಾಗಿ ಬೆಳೆಯುವಂತೆ ತಮ್ಮ ಯತ್ನಗಳನ್ನು ಮುಂದುವರಿಸಿದರು ಎಂದು ಸರ್ಕಾರದವರು ಮಾನ್ಯ ರಾಜ್ಯಪಾಲರ ಬಾಯಿಯಲ್ಲಿ ಹೇಳಿಸಿದ್ದಾರೆ. ಕಳೆದ ಎರಡು ವರ್ಷಗಳ ಹಿಂದೆ ಗವರ್ನರ್‌ರವರ ಬಾಯಿಯಲ್ಲಿ ಏನು ಹೇಳಿಸಿದ್ದಾರೆ ಅದಕ್ಕೆ ತದ್‌ವಿರುದ್ಧವಾದ ವಾತಾವರಣವಿರುವಾಗ ಈ ಮಾತನ್ನು ಹೇಳಿಸಿರುವುದು ಸೌಜನ್ಯಕ್ಕೆ ದೂರವಾದುದು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಅದು ಏನೆಂದರೆ "ಪಂಗಡಗಳ ಆರ್ಥಿಕ ತಾರತಮ್ಯಗಳನ್ನು ತೊಲಗಿಸಿ" ಎಂದು ಹೇಳಿದ್ದಾರೆ. ಕಳೆದ ಎರಡು ವರ್ಷದಿಂದ ದೇಶದಲ್ಲಿ ಅನೀತಿಯಿಂದ ಸಂಪತ್ತನ್ನು ಮಾಡಿರತಕ್ಕ ಯಾರೇ ಆಗಲೀ, ರಾಜಕಾರಣಿಯಾಗಲೀ, ಸರಕಾರಿ ಅಧಿಕಾರಿಯಾಗಲೀ, ವ್ಯಾಪಾರಸ್ಥರು ಆಗಲೀ

ಅವರು ಒಳ್ಳೆಯ ಶ್ರೀಮಂತರು ಆಗಿದ್ದಾರೆ. ಬಡವರು ಕಡು ಬಡವರು ಆಗಿದ್ದಾರೆ ಅನೇಕ ರೀತಿಯ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ.

Madam Speaker in the chair.

ಶ್ರೀಮತಿ ಇಂದಿರಾಗಾಂಧಿಯವರ ಪಕ್ಷದವರೇ ಹೆಚ್ಚಿನ ಸಂಖ್ಯೆಯಲ್ಲಿ ಬಂದರೆ ಯಾರೂ ಜಾರಿಯಲ್ಲಿ ತರದಂಥ ಒಳ್ಳೆಯ ಅಡ್ಮಿನಿಸ್ಟ್ರೇಷನ್ ದೇಶಕ್ಕೆ ಕೊಡುತ್ತೇವೆ ಎಂದು ಬಾಯಿತುಂಬ ಹೇಳಿ ಮಾತನಾಡಿದರು, ನಾನು ಅವರನ್ನು ಒಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಹೆಚ್ಚು ಹಣವನ್ನು ಸಂಪಾದನೆ ಮಾಡುತ್ತಾ ಇರತಕ್ಕ ಶ್ರೀಮಂತರ ಬಗ್ಗೆ ಯಾವರೀತಿಯಲ್ಲಿ ಕ್ರಮವನ್ನು ತೆಗೆದುಕೊಂಡಿದ್ದೀರಿ? ಶ್ರೀಮಂತರಿಗೂ ಬಡವರಿಗೂ ಇರುವ ಅಂತರವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಎರಡು ಮೂರು ವರ್ಷಗಳಿಂದ ಟಾಟಾ ಬಿರ್ಲಾ ಮುಂತಾದ ದೊಡ್ಡ ಉದ್ದಿಮೆದಾರರುಗಳ ಸಂಪತ್ತು ಒಂದಕ್ಕೆ ಎರಡರಷ್ಟು ಹೆಚ್ಚಾಗಿದೆ. ಸುಮಾರು 1969ನೇ ಇಸ್ವಿಯಲ್ಲಿ ಟಾಟಾ, ಬಿರ್ಲಾ ರವರ ಸಂಪತ್ತು ಒಟ್ಟು ಆಸ್ತಿ 590 ಕೋಟಿ ಇತ್ತು ಎಂದು ನನಗೆ ಜ್ಞಾಪಕ ಇದೆ, ಇತ್ತೀಚಿನ ಸರ್ವೆ ಪ್ರಕಾರ 750 ಕೋಟಿ ರೂಪಾಯಿಗೆ ಏರಿದೆ. ಇಂಥ ದೊಡ್ಡ ಬಂಡವಾಳಶಾಹಿಗಳಿಗೆ ಕೇಂದ್ರ ಸರ್ಕಾರದವರು ಅನೇಕ ವಿಧವಾದಂಥ ಸಹಾಯಗಳನ್ನು ಕೊಟ್ಟು ಅನೇಕ ಲೈಸನ್ಸ್‌ಗಳನ್ನು ಕೊಟ್ಟು ಅವರ ಬಂಡವಾಳವನ್ನು ಹೆಚ್ಚಿಸಿದ್ದಾರೆ. ಬಡವನಿಗೆ ಯಾವ ವಿಧವಾದಂಥ ಸಹಾಯವನ್ನು ಮಾಡಿದ್ದೀರಿ ಎಂದು ಪ್ರಶ್ನೆ ಕೇಳುತ್ತೇನೆ. ಎಷ್ಟರಮಟ್ಟಿಗೆ ಬಡವ ಮತ್ತು ಶ್ರೀಮಂತರ ಅಂತರವನ್ನು ತಗ್ಗಿಸುವುದಕ್ಕೆ ಪ್ರಯತ್ನ ಮಾಡಿದ್ದೀರಿ. 1969ನೇ ಇಸ್ವಿಯಲ್ಲಿ ನಿಮ್ಮ ನಾಯಕಿ ಇಂದಿರಾಗಾಂಧಿಯವರು ಅಧಿಕಾರಕ್ಕೆ ಬಂದ ಮೇಲೆ ಕಬ್ಬಿಣ ಮತ್ತು ಸ್ಟೀಲ್‌ನ ರೇಟ್ 8 ನೂರು ರೂಪಾಯಿ ಇದ್ದದ್ದು ಇಂದು 3 ಸಾವಿರ ರೂಪಾಯಿಗೆ ಹೋಗಿದೆ. ಸ್ವಲ್ಪ ಹೆಚ್ಚು ಕಡಿಮೆ ಮೂರು ಮೂರುವರೆ ಪಟ್ಟು ಹೆಚ್ಚಾಗಿದೆ. ಅವರು ಕೇಳಿ ಕೇಳಿದಾಗಲೆಲ್ಲಾ ಅವರಿಗೆ ಸಹಾಯ ಮಾಡಿ ಲೈಸನ್ಸ್‌ಗಳನ್ನು ಕೊಟ್ಟು ಅವರ ಆಸ್ತಿಯನ್ನು ಬೆಳೆಸಿದ್ದಾರೆ. ಬಂಡವಾಳಶಾಹಿಗಳು ತಲೆ ಎತ್ತಿ ನಿಲ್ಲಬೇಕಾದರೆ ನೀವೇ ಅದಕ್ಕೆ ಕಾರಣಕರ್ತರು. ನೀವು ಹೇಳತಕ್ಕಂಥ ವಾದ ಸೋಶಿಯಲಿಜಂ ಏನು ಹೇಳುತ್ತೀರಿ; ಬಡವರಿಗೆ ಮಾತ್ರ ಉಪದೇಶ ಮಾಡಿಕೊಂಡು ಶ್ರೀಮಂತರು ಹೆಚ್ಚು ಶ್ರೀಮಂತರನ್ನಾಗಿ ಮಾಡುವುದಕ್ಕೆ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಸಹಾಯ ಮಾಡುತ್ತಿದ್ದೀರಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಡವರ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಎಲೆಕ್ಷನ್‌ಗಿಂತ ಮುಂಚೆ ಆಡಳಿತ ಪಕ್ಷದ ಮುಖಂಡರು, ಕುಡಿಯುವ ನೀರಿನ ಭಾವಿಗಳನ್ನು ತೋಡಿಸುತ್ತೇವೆ, ಬಡವರ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ನಮ್ಮ ಪಕ್ಷಕ್ಕೆ ಹೆಚ್ಚಿನ ಬಹು

(ಶ್ರೀ ಕೆ. ಹೆಚ್. ಹನುಮೇಗೌಡ)

ಮತ ಸಿಕ್ಕಿದರೆ ಈ ಎಲ್ಲಾವನ್ನು ಮಾಡುತ್ತಾರೆಂದು ಈ ದೇಶದ ಜನತೆ ತಿಳಿದು ಕೊಂಡಿದ್ದರು ನಾನುಕೂಡ ಅನೇಕ ಸಂದರ್ಭಗಳಲ್ಲಿ ಈ ಮುಖಂಡರು ಮಾತನಾಡು ವಾಗ ನಾನು ಕೇಳಿದ್ದೇನೆ.

ಸ್ವಾಮಿ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ 150-200 ರೂಪಾಯಿಯಲ್ಲಿ ಸುಖವಾಗಿ ಜೀವನ ಮಾಡುತ್ತಿದ್ದವರು ಗರೀಬಿ, ಬಡತನ ತೊಲಗಿಸುತ್ತೇವೆಂದು ಹೇಳಿ ನಿಮ್ಮ ಸರ್ಕಾರ ಬಂದಮೇಲೆ 600-700 ರೂಪಾಯಿ ಖರ್ಚು ಮಾಡಿದರೂ ಇವತ್ತಿನ ದಿವಸ ಅವರು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಆಗುತ್ತಿಲ್ಲ. ಎಷ್ಟರ ಮಟ್ಟಿಗೆ ತಮ್ಮ ಕಾರ್ಯಭಾರವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆಂದು ತಾವು ಹೇಳಿರತಕ್ಕ ವಾದದಲ್ಲಿ ಹುರುಳಿಲ್ಲ, ಬಡ ಜನತೆಗೆ ಆಶೆ ಆಮಿಶ ತೋರಿಸಿ ವಂಚನೆ, ಕಷ್ಟಪರಂಪರೆಗಳಿಗೆ ನೀವೇ ಕಾರಣ ಕರ್ತರಾಗಿದ್ದೀರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸ್ವಾಮಿ ಮೂರನೇ ಒಂದು ಭಾಗ ಬಡತನದ ಲೆವಲ್‌ಗಿಂತ ಕಡಿಮೆ ಇದೆ ಎಂದು ನೀವೇ ಮಾತನಾಡಿದ್ದೀರಿ, ಬಡವರ ಹೆಸರಿನಲ್ಲಿ, ಬಡವರ ಓಟನ್ನು ಪಡೆದುಕೊಂಡು ಬಂದಿರತಕ್ಕವರು ಅವರ ಬಗ್ಗೆ, ಅವರ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವುದಕ್ಕಾಗಿ ಏನು ಕಾರ್ಯಕ್ರಮವನ್ನು ತೆಗೆದು ಕೊಂಡಿದ್ದೀರಿ ಎಂದು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಅವರ ಕಷ್ಟಪರಂಪರೆಗಳನ್ನು ಜಾಸ್ತಿ ಮಾಡಿ, ನೆಮ್ಮದಿಯಿಂದ ಜೀವನ ಮಾಡು ವುದಕ್ಕೂ ಕೂಡ ಕಷ್ಟವಾಗಿ ಒಂದು ಹೊತ್ತು ಕೂಳೂ ಸಿಕ್ಕದ ಪರಿಸ್ಥಿತಿಯನ್ನು ದೇಶದಲ್ಲಿ ಉತ್ಪತ್ತಿ ಮಾಡಿ ಅವರ ಶಾಪಕ್ಕೆ ಬಲಿಯಾಗಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ಗ್ರಾಮಾಂತರ ಪ್ರದೇಶದ ರೈತರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಸುಮಾರು 7-8 ವರ್ಷಗಳಿಂದ ಈಚೆಗೆ ರಾಗಿ 80 ರೂಪಾಯಿ ಇದ್ದದು 130 ರೂ. ಆಗಿದೆ ಅಕ್ಕಿ 1.20, 1.30 ಇದ್ದದು 2.50, 3-00 ಆಗಿದೆ ಮುಕ್ಕಾಲು ಭಾಗ ಜಾಸ್ತಿಯಾಯಿತು, ರೇಟ್ ಜಾಸ್ತಿಯಾಯಿತು ಇಳಿಸಬೇಕೆಂದು ಹೇಳಿ, ಆದಕ್ಕಾಗಿ ಹೋರಾಟ ಮಾಡಿ, ಇವತ್ತು ನೀವು ರೈತರ ಮೇಲೆ ಒತ್ತಾಯ ವನ್ನು ತಂದು ಸಾಧ್ಯವಾದ ಮಟ್ಟಿಗೆ ರೇಟನ್ನು ಇಳಿಸುವುದಕ್ಕೆ ಪ್ರಯತ್ನ ಮಾಡಿದ್ದೀರಿ ಬಹಳ ಸಂತೋಷ. ಇದೇ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನೀವು ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ 8 ನೂರು ರೂಪಾಯಿ ಇದ್ದ ಕಬ್ಬಿಣ 3 ಸಾವಿರ ರೂಪಾಯಿ ಆಯಿತು ಒಂದಕ್ಕೆ 8 ರಷ್ಟು ಆಯಿತು ರೈತರು ಉಪಯೋಗಿಸತಕ್ಕಂಥ ಗುದ್ದಲಿ 5 ರೂ. ಇದ್ದದು 15ರೂಪಾಯಿ ಆಯಿತು, ಪಿಕಾಸಿ 5ರೂ. ಇದ್ದದು 18-20 ರೂಪಾಯಿ ಆಯಿತು ಒಂದಕ್ಕೆ 3ಪಟ್ಟು ಜಾಸ್ತಿಯಾಯಿತು.

ರೈತರು ಉತ್ಪತ್ತಿ ಮಾಡತಕ್ಕ ವಸ್ತುಗಳ ಬೆಲೆ ಒಂದಕ್ಕೆ ಒಂದೂವರೆಯಷ್ಟು ಆದಾಗ ಅವರ ಮೇಲೆ ಸರ್ಕಾರದವರು ಯುದ್ಧ ಶುರು ಮಾಡಿದರು. ಆದರೆ ರೈತರು ಕೊಂಡುಕೊಳ್ಳತಕ್ಕ ಸಾಮಾನುಗಳ ಬೆಲೆ ಒಂದಕ್ಕೆ ಮೂರರಷ್ಟು ಅದರೂ ಕೂಡ ಒಂದು ಚಕಾರ ಶಬ್ದವನ್ನು ಎತ್ತಲಿಲ್ಲ. ಇವರ ಈ ಒಂದು ಆರ್ಥಿಕ ನೀತಿ ಯಿಂದಾಗಿ ಈಗಿನ ಗ್ರಾಮಾಂತರ ಪ್ರದೇಶದ ಆರ್ಥಿಕ ಪರಿಸ್ಥಿತಿ ಉಲ್ಬಣ ಅವಸ್ಥೆಗೆ ಬಂದಿದೆ. ಅರ್ಥಿಕ ವ್ಯವಸ್ಥೆ ಕುಸಿದು ಬೀಳುವ ಸ್ಥಿತಿಗೆ ಬಂದಿದೆ. ರೈತರು ಬೆಳೆಯುವ ಪದಾರ್ಥಗಳಿಗೆ ಬೆಲೆ ನಿಗದಿ ಮಾಡದೆ, ಈ ರೀತಿಯಲ್ಲಿ ಅವನು ಉಪಯೋಗಿಸುವ ಬೀಜ, ಗೊಬ್ಬರ, ಕಬ್ಬಿಣದ ಪದಾರ್ಥಗಳಿಗೆ ಮೂರು ನಾಲ್ಕರಷ್ಟು ಬೆಲೆ ಹೆಚ್ಚಾದರು ಅದನ್ನು ತಗ್ಗಿಸುವುದಕ್ಕೆ ಪ್ರಯತ್ನ ಮಾಡಲಿಲ್ಲ. ರೈತ ಬೆಳೆದಿದ್ದಕ್ಕೆ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತ ಇದ್ದೀರಿ. ಇದು ಯಾವ ನ್ಯಾಯ ಎಂದು ಮುಖ್ಯ ಮಂತ್ರಿಗಳನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟ ಪಡುತ್ತೇನೆ. ನಾನು ಉದಾಹರಣೆ ಏತಕ್ಕೆ ಹೇಳಿದೆ ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಆಗಿರತಕ್ಕ ತೊಂದರೆಯನ್ನು ತಮ್ಮ ಗಮನಕ್ಕೆ ತರಲು ನಾನು ಈ ಉದಾಹರಣೆಯನ್ನು ಹೇಳಿದೆ. ಎರಡು ಮೂರು ವರ್ಷಗಳ ಹಿಂದೆ ರೈತರ ಆಸ್ತಿ ಮತ್ತು ಸಾಲ ಸೋಲಗಳು ಏನು ಇದ್ದವು ಎಂದು ಸರ್ವೆ ನಡೆಸಿದರೆ ಈಗಿನ ದಿವಸ ರೈತ ಏನು ತೊಂದರೆಯಲ್ಲಿದ್ದಾರೆ ಏನು ಕಷ್ಟದಲ್ಲಿದ್ದಾನೆ. ಮೂರು ವರ್ಷದ ಹಿಂದೆ ಇದ್ದುದರಿಂದ ಈಗ ಮೂರು ನಾಲ್ಕರಷ್ಟು ಜಾಸ್ತಿ ಸಾಲ ಮಾಡಿಕೊಂಡು ಉಳಿಯುವುದಕ್ಕೆ ಸಾಧ್ಯವಾಗದೆ ಕಷ್ಟದ ಪರಿಸ್ಥಿತಿಯಲ್ಲಿ ಇದ್ದಾನೆ ಎಂಬುದು ಗೊತ್ತಾಗುತ್ತದೆ. ರೈತ ಬೆಳೆಯುತಕ್ಕ ಪದಾರ್ಥಗಳ ನ್ಯಾಯ ಬೆಲೆಗೆ ಪ್ರಯತ್ನ ಮಾಡದೆ ತಾವು ಅವನು ಕೊಂಡುಕೊಳ್ಳತಕ್ಕಂಥ ಪದಾರ್ಥಗಳ ಬೆಲೆಯನ್ನು ತಗ್ಗಿಸಲು ಏತಕ್ಕೆ ಪ್ರಯತ್ನ ಮಾಡಲಿಲ್ಲ ಎಂದು ಮುಖ್ಯ ಮಂತ್ರಿಗಳನ್ನು ಕೇಳು ವುದಕ್ಕೆ ಇಷ್ಟಪಡುತ್ತೇನೆ.

4-00 P. M.

ಭೂಸುಧಾರಣೆಯನ್ನು ಜಾರಿಗೆ ತಂದಿರಿ, ಬಹಳ ಸಂತೋಷ. ಜಮೀನು ಇಲ್ಲದವರಿಗೆ ಜಮೀನು ಕೊಡುತ್ತೇವೆಂದು ಹೇಳುತ್ತಿದ್ದೀರಿ. ಒಂದು ಪ್ರಶ್ನೆ ಕೇಳ ಬೇಕಾಗಿದೆ. ತಿಳುವಳಿಕೆ ಇಲ್ಲದಂಥ ಮಿಕ್ಕಿದ ಜನರು 100ಕ್ಕೆ 80 ಭಾಗ ಇರುವ ಕಡೆ ತಾವು ಈ ರೀತಿ ಪರೀಕ್ಷೆ ಮಾಡಿಕೊಂಡು ಹೋಗುತ್ತಾ ಇದ್ದೀರಿ. ಆದರೆ ಟೌನ್‌ನಲ್ಲಿ ಇರತಕ್ಕ ಶ್ರೀಮಂತರ ಬಗ್ಗೆ ಯಾವ ಕಾರ್ಯಕ್ರಮವನ್ನು ತೆಗೆದು ಕೊಂಡು ಬಂದಿಲ್ಲ. ಅವರು ಇನ್ನಷ್ಟು ಶ್ರೀಮಂತರು ಆಗುವ ಹಾಗೆ ಮಾಡುತ್ತಾ ಇದ್ದೀರಿ. ಅವರ ಉತ್ಪತ್ತಿಯನ್ನು ಮಾಡುವುದಕ್ಕೆ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇಲ್ಲ. ತಾವು ಪಟ್ಟಣದಲ್ಲಿ ಇರುವವರ ಆಸ್ತಿಯ ಬಗ್ಗೆ ಮಿತಿಯನ್ನು ಯಾತಕ್ಕೆ ತರಲಿಲ್ಲ ಎಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ.

(ಶ್ರೀ ಕೆ. ಹೆಚ್. ಹನುಮೇಗೌಡ)

ಅದರ ಬಗ್ಗೆ ತಾವು ಗಮನವನ್ನು ಕೊಡುತ್ತಾ ಇಲ್ಲ. ಕಾರಣ ಏನು ಎಂದರೆ ನಿಮ್ಮ ಪಾರ್ಟಿಯ ಮುಖಂಡರು ನಿಮ್ಮ ಪಾರ್ಟಿ ಒಂದಕ್ಕೆ ಸಹಾಯ ಮಾಡತಕ್ಕ ಅನೇಕ ಶ್ರೀಮಂತರು ಪಟ್ಟಣದಲ್ಲಿ ಇರುವುದರಿಂದ ಅವರ ತಂಟೆಗೆ ಹೋಗಕೂಡದು ಎಂದು ನಿರ್ಣಯ ತೆಗೆದುಕೊಂಡು ಇದರ ಬಗ್ಗೆ ನಿರ್ಣಯವನ್ನು ಮುಂದೂಡಿ ಕೊಂಡು ಬರುತ್ತಾ ಇದ್ದೀರಿ ಎಂದು ಖಡಾಖಂಡಿತವಾಗಿ ಹೇಳುವುದಕ್ಕೆ ಇಷ್ಟಪಡು ತ್ತೇನೆ. ಮಾನ್ಯ ಸಿದ್ಧವೀರಪ್ಪನವರು ಕೋಟಿ, ಕೋಟಿ ರೂಪಾಯಿ ದುಡ್ಡು ಖರ್ಚು ಮಾಡಿ ಜನರ ಉತ್ಪತ್ತಿ ಜಾಸ್ತಿ ಆಯಿತು ಎಂದು ಹೇಳಿದರು. ದುಡ್ಡು ಖರ್ಚು ಮಾಡಿರುವುದು ನಿಜ. ನಾನಾ ಯೋಜನೆಗಳನ್ನು ಸರ್ಕಾರದವರು ದೇಶದಲ್ಲಿ ತಂದಿದ್ದೀರಿ ಅದು ಇಲ್ಲ ಎಂದು ಹೇಳುವುದಿಲ್ಲ. ಆದರೆ ಆ ಯೋಜನೆ ಗಳಿಗೆ ಖರ್ಚು ಮಾಡಿದಂಥ ದುಡ್ಡು ಸದ್ವಿನಿಯೋಗವಾಗಿದೆಯೇ ಅಥವಾ ಇಲ್ಲವೆ, ಇದರಿಂದ ಬಂದಿರತಕ್ಕ ಉತ್ಪತ್ತಿ ಏನು ಎನ್ನುವುದರ ಬಗ್ಗೆ ಸರ್ಕಾರ ಆಲೋಚನೆ ಮಾಡಿದೆಯೇ ಎಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಉದಾಹರಣೆ ಕೊಡುತ್ತೇನೆ. ರೋಡ್ ಪಕ್ಕದಲ್ಲಿ ಅನೇಕ ಗುಂಡಿಗಳನ್ನು ತೆಗೆದು ಸಾಲುಮರಗಳನ್ನು ನೆಡುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಎಲ್ಲ ರೋಡ್‌ಗಳ ಪಕ್ಕದಲ್ಲಿ ಗುಂಡಿಗಳನ್ನು ತೆಗೆದು ಇದ್ದೀರಿ. ಒಂದು ಗುಂಡಿಗೆ ಒಂದು ರೂಪಾಯಿ ಖರ್ಚು ಆದರೆ ಟೆಂಡರ್ ಕಾಲ್‌ಫರ್ ಮಾಡಿ 5-6 ರೂಪಾಯಿ ಕೊಟ್ಟು ಲಕ್ಷಾಂತರ ರೂಪಾಯಿ ದುಡ್ಡನ್ನು ಪೋಲು ಮಾಡಿದ್ದೀರಿ. ಇದರಿಂದ ಜನರಿಗೆ ಪ್ರಯೋಜನ ಆಗಲಿಲ್ಲ ಮತ್ತು ಗಿಡಗಳನ್ನು ನೆಡಲಿಲ್ಲ. ಇಷ್ಟು ಗುಂಡಿಗಳನ್ನು ತೆಗೆದು ಗಿಡ ಗಳನ್ನು ನೆಡುವುದರಿಂದ ಇಷ್ಟು ಘನ ಅಡಿ ಮರಗಳು ಬೆಳೆದವು ಎಂದು ತಾವು ಹೇಳುವುದಕ್ಕೆ ಸಾಧ್ಯವಿದೆಯೇ. ಇದೇ ರೀತಿ ಯಾವ ಯೋಜನೆ ಮಾಡಿದರು ಕೂಡ ಯೋಜನೆಯ ಫಲ ದೇಶಕ್ಕೆ ದೊರೆಯಿತೆ ಅಥವಾ ಇಲ್ಲವೇ ಎಂದು ನೋಡ ತಕ್ಕ ಪರಿಸ್ಥಿತಿ ಇವೊತ್ತು ಇಲ್ಲ. ಈ ದೃಷ್ಟಿಯಿಂದ ನಮ್ಮಲ್ಲಿ ಆಗಿರತಕ್ಕ ಯೋಜನೆ ಏನು ಆದರೂ ಕೂಡ ಅದರಿಂದ ಯಾವ ಉಪಯೋಗವೂ ಆಗಿಲ್ಲ. ಆಫೀಸು ತೆಗೆಯುವುದು, ಅಧಿಕಾರಿಗಳನ್ನು ಪೋಸ್ಟ್ ಮಾಡುವುದು, ಜವಾನರು ಗುಮಾಸ್ತರು ಗಳನ್ನು ಹಾಕುವುದು ಜೀಪು ಕೊಡುವುದು ಈ ರೀತಿ ಯೋಜನೆಗಳನ್ನು ಮಾಡಿ ದೇಶದ ದುಡ್ಡು ಇದಕ್ಕೆ ಖರ್ಚು ಆಗುತ್ತದೆಯೇ ಹೊರತು ದೇಶದ ಆರ್ಥಿಕ ಸ್ಥಿತಿ ಯನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರ ಏನು ಮಾಡಲಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ರೈತ ಕೆರೆಗಳನ್ನು ರಿಪೇರಿ ಮಾಡಬೇಕು ಎಂದರೆ ಸರ್ಕಾರದಲ್ಲಿ ದುಡ್ಡು ಇಲ್ಲ ಎಂದು ಹೇಳುತ್ತೀರಿ. ರೈತರಿಗೆ ಬೇಕಾದ ಗೊಬ್ಬರ ಮುಂತಾದ ಅವಶ್ಯಕ ವಸ್ತುಗಳನ್ನು ತಯಾರು ಮಾಡಲು, ಫ್ಯಾಕ್ಟರಿಗಳಿಗೆ ದುಡ್ಡು ಹಾಕಿ ಎಂದರೆ ದುಡ್ಡು ಇಲ್ಲ ಎಂದು ಹೇಳುತ್ತೀರಿ. ಆದರೆ ಪಟ್ಟಣಗಳಲ್ಲಿ ಕೋಟ್ಯಾಂತರ ರೂಪಾಯಿ ಖರ್ಚಿನಿಂದ ಬಿಲ್ಡಿಂಗ್ ಕಟ್ಟಿದ್ದೀರಿ. ಯಾವ ಊರಿಗೆ

ಹೋಗಿ ನೋಡಿದರು ಸರ್ಕಾರದ ಹಣವನ್ನು ತೊಡಗಿಸಿ ಬೇರೆ ದೇಶಗಳಿಂದ ತಂದ ಸಾಲ ಇಲ್ಲಿ ಸದ್ವಿನಿಯೋಗವಾಗುತ್ತ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ ಕೇಂದ್ರ ಸರ್ಕಾರದ ಬಗ್ಗೆ ತಾವು ಒಂದು ದೃಢವಾದ ನಿಲುವನ್ನು ತಾಳಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುಕ್ಕೆ ಇಷ್ಟಪಡುತ್ತೇನೆ. ಕಳೆದ ಸಾರಿ ಉತ್ತರ ಕರ್ನಾಟಕದಲ್ಲಿ ಬರಗಾಲ ಬಂದಾಗ ಮಾನ್ಯ ಇಂದಿರಾ ಗಾಂಧಿಯವರು ಬ್ಲಾಂಕ್ ಚೆಕ್ ಕೊಟ್ಟಿದ್ದಾರೆ ಎಂದು ಹೇಳಿ ಭಾಷಣ ಮಾಡಿದ್ದೀರಿ. ಎಷ್ಟು ಖರ್ಚು ಮಾಡಿದರು, ಎಷ್ಟು ದುಡ್ಡನ್ನು ಕೇಂದ್ರ ಸರ್ಕಾರ ನಮಗೆ ಕೊಡುತ್ತದೆ ಎಂದು ಅಪ್ಪಣೆ ಕೊಡಿಸಿದ್ದೀರಿ. ಆದರೆ ಕಡೆಯೊಳಗೆ 63 ಕೋಟಿ ರೂಪಾಯಿ ಖರ್ಚು ಮಾಡುವಾಗ 40 ಕೋಟಿ ರೂಪಾಯಿ ಕೇಂದ್ರ ಸರ್ಕಾರ ದವರು ಕೊಟ್ಟರು. ಇದರ ಪರಿಣಾಮ ಏನು ಎಂದರೆ ಹಳೆಯ ಮೈಸೂರು ಭಾಗದಲ್ಲಿ ಬಡ್ಜೆಟ್ಟಿಗೆ ಸೇರಿದ ನೂರಾರು ಕೆಲಸಗಳನ್ನು ನಿಲ್ಲಿಸಿ ಅವುಗಳಿಗೆ ಒದಗಿಸುವ ಹಣವನ್ನು ಅಲ್ಲಿ ಖರ್ಚು ಮಾಡಿ ಬಿಟ್ಟಿದ್ದೀರಿ. ಕೇಂದ್ರಸರ್ಕಾರದ ಮೇಲೆ ಒತ್ತಾಯ ಹಾಕಿ ಪೂರ್ತಿ ಹಣವನ್ನು ತರುವುದಕ್ಕೆ ಪ್ರಯತ್ನ ಮಾಡಲಿಲ್ಲ. ಪ್ರತಿ ತಿಂಗಳು 30 ಸಾವಿರ ಟನ್ನು ಗೋಧಿಯನ್ನು ಕೇಂದ್ರದವರು ರಾಜ್ಯ ಸರ್ಕಾರಕ್ಕೆ ಕೊಡಬೇಕಾಗಿತ್ತು. ಬರಬರುತ್ತ 20 ಸಾವಿರ ಟನ್ನು ಕೊಟ್ಟರು ಈಗ ಇದು 9 ಸಾವಿರಕ್ಕೆ ಇಳಿದಿದೆ ಎಂದು ಕೇಳಿದ್ದೇನೆ. ಆಹಾರ ಪರಿಸ್ಥಿತಿ ದೇಶದಲ್ಲಿ ಚೆನ್ನಾಗಿ ಇಲ್ಲ ಎಂದು ಏತಕ್ಕೆ ಕೇಂದ್ರಸರ್ಕಾರಕ್ಕೆ ಇಷ್ಟು ಕೊಡಬೇಕು ಎಂದು ಒತ್ತಾಯ ಮಾಡಲಿಲ್ಲ. ಅವರು ಎಷ್ಟು ಕೊಡುತ್ತಾರೋ ಅದನ್ನು ತೆಗೆದುಕೊಂಡು ಅವರ ದಾಕ್ಷಿಣ್ಯಕ್ಕೆ ಒಳಗಾಗಿದ್ದೀರಿ. ಈ ರೀತಿ ಈ ರಾಜ್ಯಕ್ಕೆ ಅನ್ಯಾಯ ಆಗುತ್ತ ಇದ್ದರು ಮುಖ್ಯ ಮಂತ್ರಿಗಳು ತಾಳ್ಮೆಯಿಂದ ಇದ್ದಾರೆ ಸಂತೃಪ್ತಿಯಿಂದ ಇದ್ದಾರೆ. ಅವರು ಹೋರಾಟ ಮಾಡಬೇಕು, ಕೇಂದ್ರ ಸರ್ಕಾರದಿಂದ ನಮಗೆ ಬರಬೇಕಾದ್ದನ್ನು ತೆಗೆದುಕೊಳ್ಳಬೇಕು ಎನ್ನುವ ಸಲುವಾಗಿ ಹೇಳುತ್ತಿದ್ದೇನೆ.

ಇನ್ನು ಒಂದು ವಿಚಾರ ಹಾಸನದಲ್ಲಿ ಪಿ ಡಬ್ಲ್ಯು. ಡಿ. ಹಗರಣದಲ್ಲಿ ದುಡ್ಡು ಪೋಲು ಆಗಿದೆ. ಎನ್‌ಕ್ವಯರಿ ಮಾಡಿಸಿದರು ತಪ್ಪು ಮಾಡಿದವರಮೇಲೆ ಕ್ರಮ ತೆಗೆದುಕೊಳ್ಳಲಿ ಸರ್ಕಾರದ ದುಡ್ಡು ಲೋಪಮಾಡಿದವರ ಮೇಲೆ ಕ್ರಮ ತೆಗೆದು ಕೊಳ್ಳಲಿ ಬೇಡ ಎಂದು ಹೇಳುವುದಿಲ್ಲ. ಆದರೆ ಅದಕ್ಕಿಂತ ಹೆಚ್ಚು ಲೋಪ ದೋಷ ಇರುವ ಅನೇಕ ಪ್ರಕರಣಗಳನ್ನು ಸರ್ಕಾರ ಏತಕ್ಕೆ ಬಚ್ಚಿಟ್ಟಿದೆ ಎಂದು ಕೇಳು ತ್ತೇನೆ. ಹಾಗೇನಾದರು ಮಾಡಿದರೆ ದೇವರು ಕ್ಷಮಿಸಲಿಕ್ಕಿಲ್ಲ ಎಂದು ಹೇಳುತ್ತೇನೆ. 2-3 ನಿದರ್ಶನಗಳನ್ನು ಇಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಬಳ್ಳಾರಿ ಡಿವಿಜನ್‌ನಲ್ಲಿ 1973ನೇ ಇಸವಿ ಡಿಸೆಂಬರಿನಲ್ಲಿ 26 ಲಕ್ಷ ರೂಪಾಯಿಗಳ ಬಿಲ್ಲುಗಳನ್ನು ಪಾಸು ಮಾಡಿ ಪೇಮೆಂಟ್ ಮಾಡಿದ್ದಾರೆ, ಎಂದು ಕೇಳಿದ್ದೇನೆ, ಇದರಲ್ಲಿ ಬೇಕಾದಷ್ಟು

(ಶ್ರೀ ಕೆ. ಹೆಚ್. ಹನುಮೇಗೌಡ)

ಅವ್ಯವಹಾರ ನಡೆದಿದೆ ಎಂದು ಗೊತ್ತಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದರೂ ಕೂಡ ಇದರ ಬಗ್ಗೆ ಯಾವ ವಿಧವಾದ ಕ್ರಮ ತೆಗೆದುಕೊಂಡಿಲ್ಲ. ಇನ್ನು ಒಂದು ಉದಾಹರಣೆ ಹೇಳುತ್ತೇನೆ ಮುನಿಸೀಫ್ ಮಾಜಿಸ್ಟ್ರೇಟ್ ಕೋರ್ಟ್ ಬೆಂಗಳೂರು ಅಲ್ಲಿ ಒಬ್ಬರು ಕಂಟ್ರಾಕ್ಟುದಾರರು ದುಡ್ಡು ಸರ್ಕಾರಕ್ಕೆ ಬರ ಬೇಕಾದ್ದು ಅವರ ಸೆಕ್ಯೂರಿಟಿ ಡಿಪಾಸಿಟ್ ಅನ್ನು ವಾಪಸ್ಸು ಮಾಡಿದ್ದಾರೆ. ಒಂದು ಭಾಗದ ಕೆಲವು ಅಧಿಕಾರಿಗಳು ಒಂದು ತರಹ ನಡೆದುಕೊಳ್ಳಲು ಕಾರಣ ಏನು ? ಇನ್ನು ಅನೇಕ ಉದಾಹರಣೆಗಳು ಇವೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಕೂಲಂಕುಷವಾಗಿ ವಿಚಾರಣೆ ನಡೆಸಬೇಕು. ಯಾರು ಯಾರು ತಪ್ಪು ಮಾಡಿ ದ್ದಾರೆಯೋ ತಕ್ಷಣ ವಿಚಾರಣೆ ಮಾಡಿ ಕ್ರಮವನ್ನು ತೆಗೆದುಕೊಳ್ಳುವ ಜವಾಬ್ದಾರಿ ಮುಖ್ಯ ಮಂತ್ರಿಗಳಿಗೆ ಇದೆ. ಹಾಸನದಲ್ಲಿ ಯಾವ ರೀತಿ ಅದನ್ನು ತೆಗೆದು ಕೊಂಡಿದ್ದಾರೋ ಅದೇ ರೀತಿ ಬೇರೆ ಕಡೆಯೂ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಐ. ಜಿ. ಸನದಿ (ಹುಬ್ಬಳ್ಳಿ) :—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ರಾಜ್ಯಪಾಲರು ಕರ್ನಾಟಕದ ಜನತೆಯ ಮುಂದೆ ಇರಿಸಿದಂಥ ಭಾಷಣವನ್ನು ಅಂತಃಕರಣಪೂರ್ವಕವಾಗಿ ಸ್ವಾಗತಿಸಿ, ಅಭಿನಂದಿಸಿ ಎರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬೇಕು ಎಂದು ನಾನು ಭಾವಿಸಿದ್ದೇನೆ. ನಮ್ಮ ವಿರೋಧ ಪಕ್ಷದ ಸನ್ಮಾನ್ಯ ಸದಸ್ಯರುಗಳು ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ಅಂತ:ಕರಣವನ್ನು ಕಳವಳಿಯನ್ನು ಪಡೆದಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಆದರೆ ಮುಂದೆ ಭಾವೀ ರಾಜ್ಯದ ಸೂತ್ರಗಳನ್ನು ಕೈಯಲ್ಲಿ ಹಿಡಿದುಕೊಳ್ಳತಕ್ಕ ಸಾಮರ್ಥ್ಯವನ್ನು ಪಡೆಯುತಕ್ಕ ಸಂಧಿಕಾಲದಲ್ಲಿ ಅವರನ್ನು ಉದ್ದೇಶಿಸಿಯಾಗಲೀ ಅಥವಾ ಅವರ ಶಾಲಾಕಾಲೇಜುಗಳ ರೀತಿನೀತಿಗಳನ್ನು ದುರುಪಯೋಗಪಡಿಸಿಕೊಂಡು ಯಾರೇ ಆಗಲಿ ಅವರು ಅನ್ಯಮಾರ್ಗದ ಕಡೆ ವಿಧ್ವಂಸಕ ಕೃತ್ಯಗಳಲ್ಲಿ ತೊಡಗುವಂತೆ ಪ್ರಚೋದನೆ ಮಾಡಬಾರದು. ರಚನಾತ್ಮಕ ಕಾರ್ಯಗಳಲ್ಲಿ ತೊಡಗುವಂತೆ ಮಾಡ ಬೇಕು ಎಂದು ಅವರ ಪರವಾಗಿ ಅಂತ:ಕರಣದಿಂದ ಕೇಳಿಕೊಳ್ಳುತ್ತೇನೆ. ರಾಜ್ಯ ಪಾಲರ ಭಾಷಣವನ್ನು ಕೂಲಂಕುಷವಾಗಿ ಓದಿದಾಗ ಅದರಲ್ಲಿ ಬರತಕ್ಕ ಒಂದೆರಡು ಮಾತುಗಳನ್ನು ನನಗೆ ಸಂಬಂಧಪಟ್ಟಿವೆ. ಆದರ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕೆಂದು ಭಾವಿಸಿದ್ದೇನೆ. ಬಹುಶ: ಹುಬ್ಬಳ್ಳಿ—ಧಾರವಾಡ ಮಹಾನಗರ ದಲ್ಲಿ ಪಡಿತರ ಪದ್ಧತಿಯನ್ನು ಪ್ರಾರಂಭಿಸುವ ಸಲುವಾಗಿ ರಾಜ್ಯದ ಮುಖ್ಯ ಮಂತ್ರಿ ಗಳಾದ ಶ್ರೀಮಾನ್ ಡಿ. ದೇವರಾಜ್ ಅರಸ್ ಅವರು ಪ್ರಯತ್ನಪಟ್ಟು ಈ ವಿಷಯ ವನ್ನು ನಿವೇದಿಸಿದ್ದಾರೆ. ಬಹುಶ: ಗಳವಸಿಗೆ ಅವರ ಬಡತನ ನಿರ್ಮೂಲನೆಗಾಗಿ ಹೋರಾಡತಕ್ಕ ಅಥವಾ ಸಹಾಯಮಾಡತಕ್ಕ ಪ್ರಥಮ ಹಂತದಲ್ಲಿ ಇದು ಒಂದು ಎಂದು ನಾನು ಭಾವಿಸಿದ್ದೇನೆ. ಪ್ರಕೃತಿ ಪುಣ್ಯದಿಂದ ಈ ವರ್ಷ ಎರಡು ಹೊತ್ತು

ಗಂಜಿಗೆ ಸಾಲುವಷ್ಟು ಅಸ್ಪದವಾಗಿದ್ದರೂ ಲಾಭ ಬಡುಕರು ಉಣ್ಣುವ ಒಡವೆಯನ್ನು ಉಣ್ಣದ ರೀತಿಯಲ್ಲಿ ಬಚ್ಚಿಟ್ಟು, ಬಡ ಜನರು ಹೊಟ್ಟೆಗಾಗಿ ಅಲೆಯುವ ಸಂದರ್ಭ ಇವತ್ತು ನಮ್ಮ ದೇಶದಲ್ಲಿ ಕಾಣುತ್ತಾ ಇದೆ. ಇವತ್ತು ನಾವೆಲ್ಲರೂ ಕೂಡಿ ಎಲ್ಲರಿಗೂ ದೊರಕುವ ಹಾಗೆ ಮಾಡತಕ್ಕದ್ದು ನಮ್ಮ ಪುಣ್ಯ. ಹಿಂದಿನ ಕಾಲದಲ್ಲಿ ತಾವು ಉಪವಾಸವಿದ್ದರೂ ಇನ್ನೊಬ್ಬರನ್ನು ಉಪವಾಸ ಇಡತಕ್ಕ ಪರಿಸ್ಥಿತಿ ನಿರ್ಮಾಣ ಮಾಡುತ್ತಾ ಇರಲಿಲ್ಲ. ಇನ್ನೊಬ್ಬರಿಗೆ ಸಹಾಯ ಮಾಡಿದ ಉದಾಹರಣೆಗಳನ್ನು ನಾವು ಬಹಳ ಕಂಡಿದ್ದೇವೆ, ಓದಿದ್ದೇವೆ, ಕೇಳಿದ್ದೇವೆ. ಈ ಸಂದರ್ಭದಲ್ಲಿ ಮಹಾಭಾರತದ ಉದ್ಯೋಗ ಪರ್ವದಲ್ಲಿ ಬರತಕ್ಕ ಒಂದು ದೃಷ್ಟಾಂತವನ್ನು ನಾವು ಉದಾರಿಸಬೇಕು ಎಂದು ಬಯಸಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಹೋದವರ್ಷ ಕ್ಷಾಮಢಾಮರಗಳು ತಲೆದೋರಿದಾಗ ಜನ ಬಹಳ ಕಂಗಾಲಾಗಿದ್ದರು. ಅದೇ ರೀತಿ ಮಹಾಭಾರತದ ಉದ್ಯೋಗಪರ್ವದಲ್ಲಿ ಒಂದು ಕಥೆ ಇದೆ. ಒಬ್ಬ ಮುದುಕ ಮುದುಕಿ, ಮಗ ಮತ್ತು ಸೊಸೆ. ಈ ನಾಲ್ಕು ಜನ ಕುಡುಕು ಗಂಜಿ ಕುಡಿದು ಬದುಕಬೇಕು ಎನ್ನುವ ಪರಿಸ್ಥಿತಿಯಲ್ಲಿ ಇರುತ್ತಾರೆ. ಮುದುಕ ಬಹಳ ಪ್ರಯತ್ನ ಮಾಡಿ ಹುಲ್ಲಿನ ಬೀಜಗಳನ್ನು ಕೂಡಿಸಿಕೊಂಡು ಬರುತ್ತಾನೆ ಅದನ್ನು ಅರೆದು ಕುಟ್ಟಿ, ಬೀಸಿ, ಗಂಜಿ ಮಾಡಿ ಕುಡಿಯಬೇಕು ಎನ್ನುವ ಪ್ರಸಂಗವಿದ್ದಾಗ, ಅವರ ಮನೆಗೆ 'ಭವತಿ ಭಿಕ್ಷಾಂದೇಹಿ'' ಎಂದು ಒಬ್ಬ ಅತಿಥಿ ಬರುತ್ತಾನೆ. ಮುದುಕ ತನ್ನ ಪಾಲಿನ ಅನ್ನವನ್ನು ಅತಿಥಿಗೆ ನೀಡಲು ಮುಂದಾಗುತ್ತಾನೆ. ಮುದುಕಿ, ನಾನು ಕೊಟ್ಟರೆ ಸೌಭಾಗ್ಯ ಸಾವು ಬರುತ್ತದೆ, ಆದುದರಿಂದ ನಾನು ಅನ್ನವನ್ನು ನೀಡತ್ತೇನೆ ಎಂದು ಹೇಳುತ್ತಾಳೆ. ನಾನು ಇದ್ದುಕೊಂಡು ನೀವು ಕೊಡುವುದೇ ಎಂದು ಹೇಳಿ, ಎಲ್ಲರಿಗಿಂತಲೂ ಮೊದಲು ಸೊಸೆ ಹೋಗಿ ಅನ್ನವನ್ನು ನೀಡುತ್ತಾಳೆ. ನಂತರ ಮುದುಕ, ಮುದುಕಿ, ಮಗ ಎಲ್ಲರೂ ತಮ್ಮ ಪಾಲಿಗೆ ಇರುವ ಗಂಜಿಯನ್ನು ಅತಿಥಿ ದೇವನಿಗೆ ನೀಡುತ್ತಾರೆ. ಮಾರನೆಯದಿವಸ ಆ ಜೋಪಡಿಯಲ್ಲಿ 4 ಹೆಣಗಳು ಬಿದ್ದಂಥ ದೃಷ್ಟಾಂತವನ್ನು ಉದ್ಯೋಗಪರ್ವದಲ್ಲಿ ಓದಿದ್ದೇನೆ. ಅಲ್ಲಿ ಬಂದಂಥ ವಿಷಯಗಳನ್ನು ಎಲ್ಲರೂ ತಿಳಿದುಕೊಂಡಿದ್ದಾರೆ. ಇಂತಹ ಯಜ್ಞ ಮಾಡತಕ್ಕ ಪ್ರಸಂಗ ಕರ್ನಾಟಕದ ಮೂರು ಕೋಟಿ ಜನರ ಮುಂದೆ ಇದೆ. ಆಹಾರ ಧಾನ್ಯವನ್ನು ಮುಚ್ಚಿಟುಕೊಂಡು ಲಾಭ ಮಾಡಿಕೊಳ್ಳುವ ಸ್ವಭಾವ ಎಂದು ಹೇಳುತ್ತಾ ಇಲ್ಲ. ಇನ್ನೊಬ್ಬರ ಮುಖದಲ್ಲಿ ಮುಗುಳ್ನಗೆಯನ್ನು ವ ಡಿಸತಕ್ಕ ನಾವು, ನಾವು ಸತ್ತರೂ ಇನ್ನೊಬ್ಬರನ್ನು ಬದುಕಿಸಬೇಕು. ಇವತ್ತಿನ ದಿವಸ ಬೇರೆಯವರಿಗೆ ಕೊಡುವಷ್ಟು ಲಭ್ಯವಾಗಿರುವುದು ನಮ್ಮ ಪುಣ್ಯ. ಈ ಸಂದರ್ಭದಲ್ಲಿ ನಾವೆಲ್ಲರೂ ಕೂಡಿ ಎಲ್ಲರನ್ನೂ ಬದುಕಿಸತಕ್ಕ ಪ್ರಯತ್ನ ಮಾಡಬೇಕು. ಸರ್ಕಾರದವರು ಈಗಾಗಲೇ ಅಲ್ಲಲ್ಲಿ ರೇಡುಗಳನ್ನು ಮಾಡಿದಾಗ ದಾಸ್ತಾನು ಇಟ್ಟಿರುವವರ ಮೇಲೆ ದಾಳಿ ಮಾಡಿದ್ದಾರೆ. ಅದರೆ

(ಶ್ರೀ ಐ. ಜಿ. ಸನದಿ)

ಪರಿಣಾಮಕಾರಿಯಾದ ಯಾವ ಕ್ರಮವನ್ನೂ ಅವರ ಮೇಲೆ ಕೈಗೊಂಡಿಲ್ಲ. ಕಾಳ ಸಂತೆ ಕೋರರನ್ನು ಸವ್ಯಾಜದಿಂದ ಬಹಿಷ್ಕಾರ ಹಾಕುವ ಕೆಲಸ ಮಾಡಿಲ್ಲ. ಇದರಿಂದ ಅವರು ಸಮಾಜದಲ್ಲಿ ನಿರ್ಭೀತಿಯಿಂದ ಗೌರವಾನ್ವಿತ ಸ್ಥಿತಿಯಲ್ಲಿ ಮೆರೆಯುವುದಕ್ಕೆ ಕಾರಣವಾಗಿದೆ. ಆಹಾರಧಾನ್ಯವನ್ನು ಮುಚ್ಚಿಟ್ಟು ಯಥೇಚ್ಛವಾಗಿ ಲಾಭ ಪಡೆಯುವ ಕಾಳಸಂತೆ ಕೋರರನ್ನು ಬಹಿಷ್ಕರಿಸಲು, ಯೋಗ್ಯವಾದ ಶಾಸನದಲ್ಲಿ ವಿಚಾರಮಾಡಬೇಕು ಎಂದು ಈ ಸದನದ ಮುಖಾಂತರ ಕೇಂದ್ರಸರ್ಕಾರಕ್ಕೆ ವಿನಂತಿ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಎರಡನೆಯದಾಗಿ, ವಿದ್ಯಾ ಸಂಸ್ಥೆಗಳ ವಿಷಯ. ಕರ್ನಾಟಕದಲ್ಲಿರತಕ್ಕ ಮೂರು ಕೋಟಿ ಕನ್ನಡಿಗರಲ್ಲಿ, 30 ಲಕ್ಷಕಿಂತ ಹೆಚ್ಚು ಉರ್ದು ಮಾತನಾಡುವ ವರಿದ್ದಾರೆಂದು ಪತ್ರಿಕೆಗಳಲ್ಲಿ ಓದಿದ್ದೇವೆ. ಮೈಸೂರು ಯೂನಿವರ್ಸಿಟಿಯಲ್ಲಿ ಕರ್ನಾಟಕ ಯುನಿವರ್ಸಿಟಿಯಲ್ಲಿ ಉರ್ದು ಛೇರ್ ಇದೆ. ಬೆಂಗಳೂರು ಯೂನಿ ವರ್ಸಿಟಿಯಲ್ಲಿ ಉರ್ದು ಪೋಸ್ಟ್ ಗ್ರಾಜುಯೇಟ್ ಸ್ಟಡಿಗಾಗಿ ಅವಕಾಶ ಮಾಡಿ ಕೊಟ್ಟಿಲ್ಲ ಎಂದು ವಿದ್ಯಾರ್ಥಿಗಳ ಕೂಗನ್ನು ಕೇಳಿದ್ದೇವೆ, ಪೇಪರುಗಳಲ್ಲಿ ಓದಿದ್ದೇವೆ. ಆದರೆ ಒಂದು ಮಾತನ್ನು ಉರ್ದುವಿನ ಬಗ್ಗೆ ಹೇಳಬೇಕು. ನಾನು ಹೇಳುವುದ ಕ್ಕಿಂತ, ನಮ್ಮ ನಾಯಕಿಯಾದ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಹೇಳಿದ್ದಾರೆ.

> "Urdu was one of the languages of India and it was a link in the chain of languages. Those who describe Urdu as the language of Muslims were doing injustice to it and the people who knew that it is a language of secularism, know that Urdu was not only colourful but also effective and it played a significant role in the Indian movement."

ಎನ್ನತಕ್ಕ ಮಾತನ್ನು ಪ್ರಧಾನ ಮಂತ್ರಿಗಳು ಹೇಳಿದ್ದಾರೆ ಮೈಸೂರು ವಿಶ್ವವಿದ್ಯಾ ನಿಲಯದಲ್ಲೂ ಕೂಡ ವಿದ್ಯಾರ್ಥಿಗಳ ಬಹುದಿನದ ಬೇಡಿಕೆಯಾಗಿದೆ. ಕಾಸ್ಮಾ ಪಾಲಿಟನ್ ನಗರಗಳಲ್ಲಿ ಪಂಜಾಬಿಗಳು ಸಿಕ್ಕರು, ಉರ್ದುವಿನಲ್ಲಿ ನಿಷ್ಣಾತರು. ಹೈದರಾಬಾದ್ ಕರ್ನಾಟಕದ ಜನರು ಉರ್ದುವಿನಲ್ಲಿ ನಿಷ್ಣಾತೆಯನ್ನು ಪಡೆದಿದ್ದಾರೆ. ಛೇರ್ ಪೋಸ್ಟ್ ಗ್ರಾಜುಯೇಟ್ ಸ್ಟಡಿ ಸಲುವಾಗಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಮಾಡಿಕೊಡಬೇಕು ಎಂದು ಸಭೆಯ ಮುಖಾಂತರ ಕೇಳಿ ಕೊಳ್ಳುತ್ತೇನೆ.

ಮೂರನೆಯದಾಗಿ, ಹುಬ್ಬಳ್ಳಿ—ಧಾರವಾಡಕ್ಕೆ ಸಂಬಂಧಪಟ್ಟಂತೆ ರಾಜ್ಯಪಾಲರು ಹೇಳಿದ್ದಾರೆ. ಹುಬ್ಬಳ್ಳಿ—ಧಾರವಾಡ ಕಾರ್ಪೊರೇಷನ್ 2500 ನಿವೇಶನಗಳನ್ನು ರಚಿಸುವ ಉದ್ದೇಶವನ್ನಿಟ್ಟುಕೊಂಡಿದ್ದಾರೆ. ಹಳ್ಳಿಗಳಲ್ಲಿ ವಸತಿಹೀನರಾಗಿರತಕ್ಕ, ಯಾವ ಸೈಟೂ ಇಲ್ಲದೇ ಇರತಕ್ಕಂಥವರಿಗೆ ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಆದರೆ ನಗರ ಪ್ರದೇಶಗಳಲ್ಲಿ ಟ್ರಸ್ಟ್ ಬೋರ್ಡ್ ರಚಿಸಿ ಬೆಂಗಳೂರು ನಗರದಲ್ಲಿ ಮನೆಗಳನ್ನು, ಸೈಟುಗಳನ್ನು ಕೊಡತಕ್ಕ ವಿಷಯ ವಿದಿತವಾಗಿದ್ದರೂ, ಹುಬ್ಬಳ್ಳಿ—ಧಾರವಾಡದಲ್ಲಿ ಯಾವ ತರಹದ ಕೆಲಸವೂ ಆಗಲಿಲ್ಲ. ಮೇಯರ್‌ರವರು 3 ಲಕ್ಷ ರೂಪಾಯಿಗಳನ್ನು ಬ್ಯಾಂಕಿನಲ್ಲಿ ಇಟ್ಟಿದ್ದಾರೆ. ಇವರಿಂದ ಯಾವ ಸೈಟಿನ ಹಂಚಿಯಾಗಲಿ, ಯಾವ ಅಭಿವೃದ್ಧಿ ಕಾರ್ಯಕ್ರಮ ಆಗಿಲ್ಲ ಎಂದು ಜನ ದುಃಖದಿಂದ ಹೇಳುತ್ತಾರೆ. ಅಲ್ಲಿ ನಿಶಾನಗರ ನಿರ್ಮಾಣವಾಗುತ್ತಿದೆ. ಹುಬ್ಬಳ್ಳಿ—ಧಾರವಾಡದಲ್ಲಿ ರಾತ್ರೋರಾತ್ರಿ ನೂರಾರು ಜೋಪಡಿಗಳು ತಯಾರಾಗುತ್ತವೆ. ಕೂಲಿ ಕಾರ್ಮಿಕರು, ಬಡವರು ಹೋಗಿ ಹೋಗಿ ನಿರ್ಮಿಸುವ ಜೋಪಡಿಗಳ ಬಗ್ಗೆ ಶ್ರೀಮಂತರು ಒಂದು ಇಂಚು ಮುಂದೆ ಬಂದು ಎನ್‌ಕ್ರೋಚ್‌ಮೆಂಟಿಗೆ ಹೇಳತಕ್ಕ ಅಧಿಕಾರ ವರ್ಗದವರಿಗೆ ಕಡಿಮೆ ಇಲ್ಲ, ಈ ನಗರದಲ್ಲಿ ರಾತ್ರೋರಾತ್ರಿ ಜೋಪಡಿಗಳು ನಿರ್ಮಾಣವಾಗುತ್ತವೆ.ಕೇಳತಕ್ಕವರು ಯಾರೂಇಲ್ಲ ಯಾವಾಗಲೂ ಒಂದು ಶಾಸನ ಮಾಡಿ ಆ ಕಟ್ಟಡವನ್ನು ಕೆಡವಲು ಮಾಡಿದರೆ ನಿಮ್ಮ ಮೇಲೆ ಒಂದು ತರಹ ದೋಷವಾಗುತ್ತದೆ. ಆದುದರಿಂದ ಈವೊತ್ತಿನ ದಿವಸ ಆ ಬಿಲ್ಡಿಂಗ್‌ನ್ನು ಕೆಡವುತ್ತಾ ಇದ್ದರೆ ಅದನ್ನು ಕೆಡವುದಕ್ಕೆ ಆಸ್ಪದ ಮಾಡಿಕೊಡದ ಹಾಗೆ ಮಾಡಿ. ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಓಪನ್ ಸ್ಪೇಸ್ ಏನು ಇದೆ ಅದರಲ್ಲಾಗಲಿ ಅಥವಾ ಅದರ ಸುತ್ತಮುತ್ತ ಇರುವ ಜಾಗಗಳನ್ನಾಗಲಿ ಅಕ್ವೈರ್ ಮಾಡಿಕೊಂಡು ಅವರಲ್ಲಿ ಮಾಡಿಸಿಕೊಡಿ. ಈವೊತ್ತಿನ ದಿವಸ ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್‌ನಲ್ಲಿರುವ ಅಧಿಕಾರಿಗಳ ಅದಕ್ಷತೆಯಿಂದ ಯಾವ ಕೆಲಸವೂ ಆಗುತ್ತಾ ಇಲ್ಲ ಮತ್ತು ಅವರು ಹಣ ಮಾಡಿಕೊಳ್ಳಬೇಕು, ಎನ್ನುವ ಆಸೆಯಿಂದ ಅಲ್ಲಿಯ ಎಲ್ಲ ಕೆಲಸವೂ ಹಾಳಾಗಿ ಹೋಗುವ ಸಂದರ್ಭ ಇದೆ. ಈ ವಿಷಯವನ್ನು ಅವರ ಗಮನಕ್ಕೂ ಸಹ ತಂದಿದ್ದೇವೆ. ಆದರೂ ಸಹ ಅಲ್ಲಿ ಕಾರ್ಪೊರೇಷನ್ ಕಮೀಷನರಿಗೆ ಒಂದು ಹಿಡಿತ ಇಲ್ಲದೇ ಇರುವ ರೀತಿಯಲ್ಲಿ ಒಂದು ಬಣದಲ್ಲಿ ಇರುವುದರಿಂದ ಇದರ ಮೇಲೆ ಸರ್ಕಾರದ ಹತೋಟಿ ಇದೆಯೋ ಇಲ್ಲವೋ ಎಂದು ನಮಗೆ ಅನಿಸುತ್ತದೆ. ಇವೊತ್ತಿನ ದಿವಸ ಇದರಿಂದಾಗಿ ನಮಗೆ ಕೊಟ್ಟಿರುವ ಎರಡು ಕೋಟಿ ರೂಪಾಯಿಯಷ್ಟು ಹಣ ನಮ್ಮ ಬಡ್ಜೆಟ್ಟಿನಲ್ಲಿ ಪೋಲಾಗುತ್ತಾ ಇದೆ. ಸುಮಾರು 6-7 ವರ್ಷಗಳಿಂದಲೂ ಕೂಡ ಕಾರ್ಪೊರೇಷನನ್ನಿನವರು ಕಟ್ಟಡಗಳನ್ನು ಕಟ್ಟದೇ ಇರುವುದರಿಂದ ಬಡ್ಜೆಟ್ಟಿನಲ್ಲಿ ಕೊಟ್ಟಿರುವ ಎಲ್ಲ ಹಣವೂ ಪೋಲು ಆಗುತ್ತಾ ಇದೆ. ಎಲ್ಲವೂ ಗೋಲ್‌ಗುಂಬಸ್ ತರಹ ಆಗಿ ಹೋಗಿದೆ. ಅಲ್ಲಿ ಒಂದು ಸ್ವಿಮಿಂಗ್ ಪೂಲ್ ಕಟ್ಟಡ ಕಟ್ಟಬೇಕಾಗಿತ್ತು, ಇನ್ನೂ ಪೂರ್ತಿ ಕಟ್ಟಿಲ್ಲ. ಆದುದರಿಂದ ಈವೊತ್ತಿನ

(ಶ್ರೀ ಐ. ಜಿ. ಸನದಿ)

ದಿವಸ ಆ ಸ್ವಿಮಿಂಗ್ ಪೂಲ್‌ನಲ್ಲಿ ಎಮ್ಮೆಗಳು ಹೋಗಿ ಈಜಾಡುವಂತೆ ಆಗಿದೆ. ಮತ್ತು ನಮ್ಮ ಕಡೆ ಒಂದು ಸಾರಿ ಗೌರ್ನರ್ ಬಂದಾಗ ಕೇಳಿದರು. ಅಲ್ಲಿ ಒಂದು ಸೂಪರ್ ಬಜಾರ್ ಕಟ್ಟಡ ಕಟ್ಟುತ್ತಾ ಇದ್ದರು, ಅದನ್ನು ನೋಡಿ ಕೇಳಿದರು ಇದು ಯಾವಾಗ ಮುಗಿಯುತ್ತದೆ ಎಂದು. ನಾನು ಸತ್ಯಕ್ಕೆ ದೂರವಾದ ಮಾತನ್ನು ಹೇಳಬೇಕಾಯಿತು, ಈ ಕೆಲಸ ಮೊನ್ನೆತಾನೇ ಪ್ರಾರಂಭವಾಗಿದೆ ಎಂದು. ಈ ಕಟ್ಟಡ ಮೊದಲೇ ಕಟ್ಟಿದ್ದರೆ ಬಹಳ ಸುಲಭದಲ್ಲೇ ಆಗುತಿತ್ತು, ಆವಾಗ ಕಬ್ಬಿಣ 800 ಇದ್ದಿತು, ಇವಾಗ ನೋಡಿದರೆ 3000 ರೂಪಾಯಿತನಕ ಏರಿಹೋಗಿದೆ. ಒಂದು ಅನೆಗಾತ್ರದಷ್ಟು ಬೆಲೆಗಳು ಏರಿಹೋಗಿವೆ. ಆದುದರಿಂದ ಈ ಕೆಲಸಗಳು ಇನ್ನು ಯಾವಾಗ ಮುಗಿಯುತ್ತದೋ ಗೊತ್ತಿಲ್ಲ. ಇದರಿಂದ ಸರ್ಕಾರದ ಅಂಜಿಕೆ, ಭಯ ಕಾರ್ಪೋರೇಷನ್ ಅಧಿಕಾರಿಗಳಲ್ಲಿ ಎಷ್ಟರಮಟ್ಟಿಗೆ ಇದೆ ಎನ್ನುವುದು ಗೊತ್ತಾಗುತ್ತದೆ. ಇದರಿಂದ ಸಾವಿರಾರು, ಲಕ್ಷಾಂತರ ರೂಪಾಯಿ ಹಣಗಳು ದುರ್ವಿನಿಯೋಗವಾಗುತ್ತಿದೆ ಎಂದು ಸಾಬೀತು ಮಾಡಿದರೂ ಕೂಡ ಸರ್ಕಾರದವರು ಇದುವರೆಗೂ ಯೂವರೀತಿಯೂಗಿಯೂ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ. ಹೀಗಾಗಿ ಅಲ್ಲಿರುವ ಜನ ಒಂದು ರೀತಿಯ ಭೀತಿಯಾಗಿದ್ದಾರೆ.

ಇನ್ನು ನಮ್ಮ ಸರ್ಕಾರದವರು ಜನತಾ ವಸತಿ ಮತ್ತು ಕೊಳಚೆ ನಿರ್ಮೂಲನಾ ಕಾರ್ಯಕ್ರಮ ಮತ್ತು ಕುಡಿಯಲು ಶುದ್ಧ ನೀರು ಇವುಗಳ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೋ ಆ ಬಗ್ಗೆ ಒಂದು ಹೆಚ್ಚಿನ ಗಮನ ಕೊಟ್ಟು ಯೋಗ್ಯ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಅದರಲ್ಲೂ ಕೂಡ ಹುಬ್ಬಳ್ಳಿ-ಧಾರವಾಡ ಷಹರವನ್ನು ಬೆಂಗಳೂರಿನಂಥಹ ಸುಂದರ ನಗರವನ್ನಾಗಿ ಮಾಡಬೇಕು, ಬೆಂಗಳೂರು ನಗರಕ್ಕೆ ಯಾವ ರೀತಿಯೂಗಿ ಕೈಗಾರಿಕೆಯಲ್ಲಾಗಲಿ ಮತ್ತಿತರ ಕೆಲಸ ಕಾರ್ಯಗಳಲ್ಲಿ ಸಹಕಾರ ಕೊಡುತ್ತಾರೋ ಅದೇ ರೀತಿಯಲ್ಲಿ ನಮ್ಮ ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೂ ಕೂಡ ಸರ್ವರೀತಿಯಲ್ಲಿ ಸಹಕಾರವನ್ನು ಒದಗಿಸಿ ಕೊಟ್ಟು ಸರ್ಕಾರ ಕಣ್ಣುಹಾಯಿಸಿಕೊಡಬೇಕು ಎಂದು ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಒಂದೆರಡು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI P. A. PAWASHE :—Madam Speaker, though I am on my legs to oppose the Motion of Thanks to the Governor's Address, I cannot proceed further without congratulating this Government for the enactment of the Mysore Land Reforms Act and bringing it into force. As a result of this enactment, thousands of tenants who were

subjected to exploitation are liberated from the clutches of the land-lords. I think the Government has passed this legislation to benefit the tenants. So, I request the Government to take all precautions while implementing this law to safeguard the interests of the tenants. So saying, I will go to the address of the Governor.

The Hon'ble Governor in his address has failed to mention some of the burning problems of the day and according to me, boundry dispute between Karnataka and Maharashtra is one of them. This dispute is pending for the last 17-18 years and the people of border area are agitating for getting justice but till today the problem is unsolved. When taking into consideration the recent happenings in both the States, in the State of Karnataka and Maharashtra, I think it is a threat to our national integrity. In Maharashtra as well as in Karnataka, the same parties are in power and at the Centre, also the same party is in power. So, the party in power should make it a point to settle this dispute once for all, so that there should not be ill-feelings and ill-will between two linguistic groups, which is a threat to national integrity.

Now, another important thing is, that many of the Hon. Members while speaking, referred only to the atrocities committed by the Maharashtrians on Kannadigas but they were not fair enough to refer the atrocities committed by the Kannada people on the people living in the border area. My submission is that, Government should examine and find out the root-cause of these happenings. According to me, the cause of this happenings was the atrocities committed by the police in the City of Belgaum and on the marathi speaking people in the border area.

Madam Speaker, I would like to submit that the Police Officers in the Belgaum City have entered the houses of marati speaking people and they have assaulted women folk. There is sub-urban area called June-Belgaum

(Sri P. A. Pawashe)

which is mostly inhabited by the agriculturists. In the months of December-January, as those were days of harvesting all the people had been out for harvesting and at such time during the night time, the police entered the houses of the marathi speaking people and they have assaulted the ladies. One Police Officer, dragged the women out of fhe house. She was having a child in her arms and that child fell down and the Police kept his foot on the chest of that child. Is this pardonable? Whether the Government is aware of these atrocities committed by the Police on these ladies? I have made a representation to the Hon'ble Chief Minister while he visited Belgaum in the month of January. According to my information, the child who was beaten by the Police has died. These atrocities committed by the Police were the main cause of the happenings in both the States. I am not here to defend the atrocities committed either by the Maharashtrians or Kannadigas. I condemn these things. In the interest of our nation, I would like to submit that Government must take immediate steps to solve this problem and see that once for all this problem is settled.

Now, the Hon. Governor has made remarks in his speech on the topic of Law and Order. He has stated that the attepts of certain misguided Maharashtrian leaders to incite Maharashtrian minorities inside the State have caused some law and order problems in this State also. My humle submission is that, this statement of the Hon. Governor is not correct and misleading. The movement that is going on for the last 17-18 years in the border area is the movement of the people. It is neither the movement of the leaders of the Maharashtra, nor the M.E.S. leaders in the border area. The people of border area will not step their agitation either by force or by persuation unless and until their goal is achieved. So, my submission is, taking into consideration the

wishes of the people of the border area, this problem which is pending for a long time should be solved on the basis of the Pataskar formula. So saying, I will now go to the developments in the bordsr area. My submission is that previous Governments have very conveniently and safely neglected the development of these areas. This Goverment has taken up certain works under Rural Communication programme in my constituency but the progress is very slow. Certain minor irrigation and road works were taken under 64 Famile relief works, but those works are now stopped. My submission is that, Government must see that these road works which are pending for a long time time should be completed as early as possible. So also the famine relief works. I hope the Government would take up these works.

As regards primary education, I would like to submit that there are no sufficient school buildings and the teaching staff is also not sufficient.

As regards veterinary dispensaries, the western part of the Belgaum is completely neglected. The present arrangements are not sufficient and adequate to meet the needs of the people. In the case of the people of Belgundi village, one of the villages in my constituency, they have deposited the amount and are prepared to give necessary Place. The village Panchayat as well the Taluk Board also have passed resolutions and the proposal has been sent to the Government for the sanction of a Veterinary. I do not know where that proposal is pending. This way, of doing things creats an impression in the minds of the people that as this is border area, the Government is purposely neglecting it.

If they want to prove that they are not discriminating between the border area and any other area, then they should take up development works in the border area and see that they are completed.

(Sri P. A. Pawashe)

Then, the Governor has not made any reference to the rising prices of food grains and essential commodities. As regards rising prices, my submission is that there may be some other causes but the main cause is black-marketing, smuglling and hoarding. Unless and until this Government takes coersive steps against these people, I do not think that the prices will come down or that this evil will be stamped out.

As regards levy, I am the first man to pay the levy and I have asked all the agriculturists in my constituency to pay the levy. But taking into consideration the prices of other commodities which the agriculturists have to purchase, the price paid for levy paddy is very low and they cannot afford to sell their paddy at such low price. I have received complaints from Ambewadi in Belgaum Taluka regarding harassment in the collection of levy. I have examined some cases and found that the levy demanded is more than the area under paddy cultivation. Of course, the persons who are aggrieved have filed applications to the concerned authority and I do not know how far they will be kind enough to take into consideration their difficulties. Just to harass the tenants the Tahsildar who has gone to that village has attached the paddy of certain persons. They told him that they have sent their declaration to the Tahasildar by post. In spite of that their paddy has been attached. It was the duty of that officer to verify whether these persons have sent their declarations or not. What was the necessity to act in such a hurry and cause harassment to the people? That creates a very bad impression regarding the Government in the minds of the people and so those officers who harass the people should be dealt with severely and corrected.

I welcome the move of the Government in starting 10 sugar factories in the State. In this connection, I would

like to say that western part of Belgaum Taluk is one such suitable area where a sugar factory can be started. The main money crop grown in that area is sugarcane and more than 7 to 8 thousand acres of land is under sugarcane cultivation and if a factory is started there it will help the people of that area. There will be industrial development in the area and it will also give employment to many persons.

Now I come to one of the greatest evils *viz.*, corruption. When Opposition members criticise the Government that there is corruption in the departments of the Government, they say, ' point out where corruption is and we will take immediate action''. By so saying, do they mean to say that there is no corruption in the Government Departments ? May I know what are the steps taken by the Government to tackle it or eradicate it. My submission is that after all this Government has failed to fulfil the promises it has given to the people at the time of election. Therefore, I oppose this Motion of Thanks to the Governors address. I thank the Chair for giving me an opportunity to speak and conclude my speech.

‡ SRI PRABHAKAR TELKAR (Kalgi).—Madam Speaker, while welcoming the address of the Governor to the State Legislature, I want to point out certain things which are quite essential for the benefit of the people.

While congratulating our Government for bringing the Land Reforms Act which has been effective from the 1st of March 1974 in this State, I want to make certain observations. The Act will help the landless people to get land. But what I feel is that its implementation is a difficult job but our Government should take stern action to see that implementation is quick. What we see in the villages is that there are helpless tenants belonging to Harijans, Scheduled Castes and Scheduled Tribes people and Backward Class people. They are not in a

(Sri Prabhakar Telkar)

position to get the right that has been given in the Act. I feel that the Government should help such helpless people and see that they get their rights and the lands to which they are entitled. When the tenancy act came into force in the Hyderabad Karnataka Area, there are cases where the tenants who were entitled to be put in possession of the lands were cheated of their rights and the landlords did their best to change the records and the rights to which these poor tenants were entitled were not at all given to them.

Therefore it is the duty of every legislator who has given support to this Act to see that the Act is implemented and land reforms come into practice as intended by the legislature.

Regarding food supplies, I may submit that in Gulbarga District we had good production of bajra. There are some people who want to send this bajra to the neighbouring States and make some profit. I congratulate the Government for taking stern action and not permitting the hoarders or merchants to take this bajra to other States. I would like to suggest that it would be better if the Government were to purchase this bajra and build up buffer stock because the prices have come down now. But there will be difficulty in the months of May, June and July and after the harvest season the foodgrains will disappear from the market. Next to food, cloth is important. The Government of India and the State Government are taking steps to supply controlled cloth to the vulherable section of the population. But we see that due to drought the people in those drought affected areas are not having purchasing capacity to buy cloth. Therefore the Government of India and the State Government have thought of supplying controlled cloth through Karnataka Co-operative federation and co-operative socieites. But this controlled cloth is not reaching

the villagers and this controlled cloth is sold in cities and taluk places. I would therefore urge upon the Government to make provision to see that this controlled cloth reaches the villagers. The quota of controlled cloth allotted to this State is also less. It is 1,189 bales per year. As submitted earlier in Gulbarga, Bidar and Bijapur which were affected by drought, the purchasing capacity of people in those districts has come down. Therefore I urge upon the Government to send this controlled cloth in larger quantity to these districts. The margin of profit given to the dealers who deal in this controlled cloth must also be raised, *i. e* , from $12\frac{1}{2}\%$ to 20%.

Coming to irrigation projects, the Government have started several projects. In my constituency they have started Bennithora project, but the work is now stopped because the people there had sufficient work during the drought season. I request the Government to start these works immediately so that there will be more production and people of the State can be benefitted. With regard to minor irrigation also, I would urge upon the Government to take steps immediately to take up the minor irrigation projects in our area so that the people may be benefitted.

With regard to fisheries, places like Raichur, Gulbarga Bidar are very for away from the coastalside. People residing in these areas are not able to get fish. We will also be solving the food problem to a little extent if we arrange to supply fish to these areas. In order to do this it is necessary to have a cold storage plant in these districts. If cold storage plants are installed in these places, they can store fish and can be sold at a cheaper rate to the people in these districts From Bombay also they can get fish. As we know mutton is costly and it is beyond the reach of poor people. If fish is given which is cheaper than fish, the poor people will be benefitted. If the Government constructs some cold

(Sri Prabhakar Telkar)

storage plants in these districts it will be helpful to the people. Inland fisheries also should be developed.

Regarding forests I would submit that we are having drought in such areas where there are no forests.

Therefore I would request the Government to plant as many trees as possible in this area and particularly in Gulbarga where every now and then we face drought. By having more forest we would be getting more rains and in a way the drought problem could be solved.

Regarding NRWS schemes I would like to submit that even though 95 percent of the work has been done many of the schemes are left uncompleted and people are not getting water supply. I would urge upon the Government to look into the matter and see that these schemes wherever they arer incomplete are completed at the earliest.

Another most important thing which I would like to submit before this August House is that due to drought situation several lakhs of cattle in drought stricken areas are either perished or sold away at very cheaper rates and thereby there is great difficulty for carrying on agricultural operations in these areas alongwith the scarcity of milk. For want of sufficient cattles in these areas and particularly in Gulbarga the people are faced with accute scarcity of milk. I would therefore suggest to the Government to chalk-out certain programmes and see that sufficient cattles are sent to these places through a specific progarmme. In order to meet the scarcity of milk in Gulbarga I would also suggest the Government to supply sufficient milk powder immediately.

With these words I thank the Chair and conclude my speech.

† ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು) : ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ರಾಜ್ಯಪಾಲರು ಈ ಸದನದಲ್ಲಿ ಮಾಡಿದ ಭಾಷಣವನ್ನು ಅತ್ಯಂತ ವೇದನೆಯಿಂದ, ದುಃಖದಿಂದ ವಿರೋಧ ಮಾಡಬೇಕಾಗಿದೆ. ಏಕೆಂದರೆ, ನನಗೆ ತಿಳಿದ ಮಟ್ಟಿಗೆ, ನಮ್ಮ ಕರ್ನಾಟಕದಲ್ಲಿ ಅತ್ಯಂತ ಪವಿತ್ರವಾದ ಸ್ಥಾನ ಉನ್ನತ ಸ್ಥಾನ ಎಂದರೆ, ರಾಜ್ಯಪಾಲರ ಸ್ಥಾನ. ಇದು ಧರ್ಮದ ಪ್ರತೀಕ. ಇಂಥ ಒಬ್ಬ ಮಹಾನುಭಾವರ ಬಾಯಲ್ಲಿ ಆಡಳಿತ ಕಾಂಗ್ರೆಸ್ಸಿನ ಸರ್ಕಾರದವರು ಸತ್ಯಕ್ಕೆ ದೂರ ದೂರವಾದ ಮಾತುಗಳನ್ನು ಇದರಲ್ಲಿ ಇವರ ಮುಖಾಂತರ ಹೇಳಿಸಿದ್ದಾರೆ. ನಾವು ಇಂಥ ಮಾತನ್ನು ಕೇಳಬೇಕಾಗಿಲ್ಲ ಎನ್ನತಕ್ಕ ದೃಷ್ಟಿಯಿಂದ ವಿರೋಧ ಪಕ್ಷದ ಎಲ್ಲರೂ ಇದನ್ನು ಬಹಿಷ್ಕರಿಸಬೇಕು ಎನ್ನತಕ್ಕ ಸದುದ್ದೇಶದಿಂದ ಸಭೆಯ ಹೊರಗಡೆ ಇದ್ದೆವು. ಮೊಟ್ಟಮೊದಲನೆಯದಾಗಿ ಹೇಳಬೇಕಾದರೆ, ನಾನು ಹೇಳತಕ್ಕ ಮಾತುಗಳು ಟೀಕೆಗೋಸ್ಕರ ಅಲ್ಲ. ನಿಷ್ಠೆಯಿಂದ, ನಿಸ್ವಾರ್ಥತೆಯಿಂದ, ಜನತೆಗೆ ಸೇವೆ ಮಾಡತಕ್ಕ ರಾಜಕಾರಣಿಗಳನ್ನು ಬಿಟ್ಟು, ದಕ್ಷತೆಯಿಂದ, ಪ್ರಾಮಾಣಿಕತೆಯಿಂದ, ದೇಶಕ್ಕೋಸ್ಕರ ದುಡಿಯತಕ್ಕಂಥ ಅಧಿಕಾರಿಗಳೆಲ್ಲರನ್ನೂ ಬಿಟ್ಟು ತಮ್ಮ ಸ್ವಾರ್ಥಸಾಧನೆಗೋಸ್ಕರ ಈ ಒಂದು ಆಡಳಿತವನ್ನು ತೆಗೆದುಕೊಂಡು ರಾಜ್ಯದ 3 ಕೋಟಿ ಜನತೆಗೆ ಕೇಡನ್ನು ಬಯಸುತ್ತಾ ಇರತಕ್ಕಂಥ ಸರ್ಕಾರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ, ಹಿರಿಯ ಸದಸ್ಯರೂ, ಮತ್ತು ನನ್ನ ಸ್ನೇಹಿತರುಗಳು ಒಂದಲ್ಲ ಒಂದು ತರದಲ್ಲಿ ಸರ್ಕಾರದ ಮೇಲೆ ಟೀಕೆಯನ್ನು, ತಪ್ಪನ್ನು ಹೊರಿಸಿದ್ದಾರೆ ಈ ಕಾಂಗ್ರೆಸ್ ಸರ್ಕಾರ, ಕರ್ನಾಟಕದ ನೆಲ ಜಲದ ಪ್ರಶ್ನೆಯನ್ನು ತೆಗೆದುಕೊಂಡು ಕರ್ನಾಟಕ ಜನತೆಗೆ ಯಾವ ತರದ ಅನ್ಯಾಯವನ್ನು ಮಾಡುವುದಿಲ್ಲ ಎನ್ನತಕ್ಕ ವಚನವನ್ನು ಜನತೆಗೆ ಕೊಟ್ಟರು. ಮೊನ್ನೆ ಮಹಾರಾಷ್ಟ್ರದಲ್ಲಿ ನಡೆದಂಥ ಘಟನೆಯಲ್ಲಿ ಕನ್ನಡಿಗರ, ನಿರಪರಾಧಿ ಕನ್ನಡಿಗರ ಮೇಲೆ, ಅದರಲ್ಲೂ ಹೆಣ್ಣು ಮಕ್ಕಳನ್ನು ಬೆತ್ತಲೆ ಮಾಡಿ ಕಳುಹಿಸತಕ್ಕ ಒಂದು ದೃಶ್ಯ, ಇವೆಲ್ಲವನ್ನೂ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಕೇಳಿದ್ದಾರೆ. ಮತ್ತು ಡೆಲ್ಲಿಯಿಂದ ಒಂದು ಮಾತನ್ನೂ ಅವರು ಹೇಳಿದ್ದಾರೆ. ಈ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ, ಕಲುಷಿತ ವಾತಾವರಣದಲ್ಲಿ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಮತ್ತು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಮತ್ತು ನಮ್ಮ ಪ್ರಧಾನ ಮಂತ್ರಿಗಳಿಗೂ ಕೂಡ ಆಗುತ್ತಿಲ್ಲ. ಈ ಒಂದು ಸ್ಥಿತಿ, ಯಥಾಸ್ಥಿತಿ, ತಥಾಸ್ಥಿತಿಯಲ್ಲಿ ಉಳಿಯಲಿ ಎನ್ನುವ ಘೋಷಣೆಯನ್ನು ಅಲ್ಲಿಂದ ಮಾಡಿದರು. ಅಧ್ಯಕ್ಷರೇ, ತಮ್ಮ ಮುಖಾಂತರ ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ, ಪದೇ ಪದೇ ಅವರು ಹೇಳುತ್ತಿರುತ್ತಾರೆ, ವಿರೋಧ ಪಕ್ಷದವರು ಟೀಕೆ ಮಾಡುತ್ತಿರುತ್ತಾರೆ ಎಂದು, ಅದರೇ ಇಡೀ ಕರ್ನಾಟಕದ ಜನತೆಗೆ ಇದ್ದಂಥ ಪ್ರಶ್ನೆಯನ್ನು ಡಿಲ್ಲಿಯಲ್ಲಿ ಕುಳಿತು, ರಾಜ್ಯದ ಸಚಿವಾಲಯದ ಒಂದು ತೀರ್ಮಾನವನ್ನು, ಅವರೊಡನೆ ವಿಚಾರ ವಿನಿಮಯನ್ನೂ, ಮತ್ತು ದೇಶದ

(ಶ್ರೀ ಟಿ. ಎಂ ಮಂಜುನಾಥ)

ವಿರೋಧಪಕ್ಷಗಳೊಡನೆ ವಿಚಾರ ಮಾಡದೆ ಏಕಾ ಏಕಿ ಇಂಥ ಒಂದು ಮಾತನ್ನು ಅವರು ಅಲ್ಲಿಂದ ಆಡಬಾರದಾಗಿತ್ತು. ಇದು ಸರಿಯೇ ?

ಶ್ರೀ ಅಬ್ದುಲ್ ಸುಭಾನ್.—ಕನ್ಸಲ್ಟ್ ಮಾಡಿದ್ದಾರೆ

ಶ್ರೀ ಟಿ. ಎಂ. ಮಂಜುನಾಥ್.—ಅವರು ಡೆಲ್ಲಿಯಲ್ಲೇ ಇದ್ದಾರೆ ?

ಶ್ರೀ ಕಾಗೋಡು ತಿಮ್ಮಪ್ಪ.—ಟೈಂ ಬಂದಾಗ ಮಾತನಾಡುತ್ತೇವೆ.

ಶ್ರೀ ಟಿ. ಎಂ. ಮಂಜನಾಥ್ ;—ಇನ್ನೊಂದು ಮಾತನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಕೃಷ್ಣ ನೀರಿನ ಸಮಸ್ಯೆಯಾಗಲೀ, ರಾಜ್ಯದ ಗಡಿ ಸಮಸ್ಯೆಯಾಗಲೀ, ಇವರು ಬಗೆಹರಿಸದೆ, ಶಿವಸೇನೆಯೊಂದಿಗೆ ಚುನಾವಣಾ ಮೈತ್ರಿಯನ್ನು ಹೊಂದಿದ್ದಾರೆ. ಮಹಾರಾಷ್ಟ್ರದ ಆಡಳಿತ ಕಾಂಗ್ರೆಸ್ಸಿನವರು ಚುನಾವಣಾ ಮೈತ್ರಿಯನ್ನು ಹೊಂದಿದ್ದಾರೆ, ಇವತ್ತು ನಿಲುವಳಿ ಸೂಚನೆಯನ್ನು ಶಿವಸೇನೆಯ ಮೇಲೆ ತರಬಾರದಾಗಿತ್ತು, ತಂದಿದ್ದರೆ ಅದನ್ನು ಇವರ ಪಕ್ಷದ ಮೇಲೆಯೇ ತರಬೇಕಾಗಿತ್ತು. ನಮ್ಮ ಮುಖ್ಯ ಮಂತ್ರಿಗಳು, ತಮ್ಮಲ್ಲಿ ಸಂಖ್ಯಾ ಬಲ ಇದೆ, ಶಕ್ತಿ ಬಲ ಇದೆ, 161 ಜನ ಶಿಷ್ಟ ಕೋಟಿ ಇದೆ. ಇವರು ಕನ್ನಡ ಜನತೆಯ ಹಿತ ರಕ್ಷಣೆ ಮಾಡಲಿಲ್ಲದ ಪಕ್ಷದಲ್ಲಿ, ಇವರು ಜನತೆಗೆ ವಚನ ಭ್ರಷ್ಟಚಾರ ಮಾಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಾಗರ್ ಅವರು ಭಾಷಣ ಮಾಡುತ್ತಾ, ಮುಖ್ಯ ಮಂತ್ರಿಗಳು ಸೊಂಡೂರಿನಲ್ಲಿ ಮಾಡಿದ ಭಾಷಣದ ಬಗ್ಗೆ ಹೇಳಿದರು. ಆಮೇಲೆ ಅದನ್ನು ಅವರು, ಇಲ್ಲ ಎಂದು ಹೇಳಿದರು. ಕಾಂಗ್ರೆಸ್ ಹೆರಾಲ್ಡ್ ಎನ್ನುವ ಪತ್ರಿಕೆಯಲ್ಲಿ ಮುಖ್ಯಮಂತ್ರಿಗಳು ಆಡಿದಂಥ ಮಾತನ್ನು ಹೇಳಿದ್ದಾರೆ. "ಇಂದಿರಾಗಾಳಿಯಲ್ಲಿ ಆರಿಸಿ, ತೂರಿಸಿ ಬಂದು ಬಿದ್ದಿದ್ದೀರಿ, ಎನ್ನುವತಕ್ಕ ಮಾತನ್ನು ಆಡಿದ್ದಾರೆ. ಇದರ ಬಗ್ಗೆ ನಮಗೆ ಚಿಂತೆಯಿಲ್ಲ.

ಏನಾಯಿತೆಂದರೆ, ಜನತೆಯಿಂದ ಆರಿಸಿಬಂದಂಥ ಒಬ್ಬ ಸದಸ್ಯರಿಗೆ ಇಷ್ಟರ ಮಟ್ಟಿನ ಗತಿ ಬಂತಲ್ಲ ಎಂದು ವ್ಯಥೆಯಾಗುತ್ತಿದೆ. ರಾಜ್ಯದ ವಿಧಾನಮಂಡಲದಲ್ಲಿ ರಾಜ್ಯಪಾಲರು ಮಾಡಿದಂಥ ಭಾಷಣ ಮೂರನೆಯ ವರ್ಷದ್ದು. ನಾನು ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಹೇಳಿದಂಥ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಎಷ್ಟರಮಟ್ಟಿಗೆ ತಾವು ಪೂರೈಸಿದ್ದೀರಿ, ಎಷ್ಟು ಕೋಟಿ ಕೋಟಿ ರೂಪಾಯಿಗಳನ್ನು ತಾವು ವೆಚ್ಚಮಾಡಿದ್ದೀರಿ ? ಮಾನ್ಯ

ಸಿದ್ದವೀರಪ್ಪನವರು, ದೇವೇಗೌಡರು ಕೊಟ್ಟ ಹೇಳಿಕೆಗೆ ಉತ್ತರವಾಗಿ, ಗ್ರಾಮಾಂತರ ಪ್ರದೇಶಗಳಲ್ಲಿರುವ ಜನತೆಯ ಕಲ್ಯಾಣಕ್ಕೋಸ್ಕರ ಕೋಟಿ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ ಎಂದು ಹೇಳಿದರು. ಈ ಆಡಳಿತ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಜನ ಎಷ್ಟು ನೆಮ್ಮದಿಯಿಂದ ಇದ್ದರು, ಕನ್ನಡ ಮಾತೆಯ ರಾಜ್ಯ ಸೂತ್ರವನ್ನು ಇವರು ಹಿಡಿದಾಗ ರಾಜ್ಯಲಕ್ಷ್ಮಿ ಓಡಿಹೋಗಿ, ದರಿದ್ರ ಲಕ್ಷ್ಮಿ ಈ ನಾಡಿಗೆ ಬಂತು. ಎಲ್ಲದಕ್ಕೂ ಅಭಾವ ಶುರುವಾಯಿತು. ಒಂದಲ್ಲ, ಎರಡಲ್ಲ ಎಲ್ಲಾ ಪದಾರ್ಥಗಳಿಗೂ ಅಭಾವ. ಹಳ್ಳಿಗಳಲ್ಲಿ ಸಿಮೆಂಟಿನ ಅಭಾವ. ತಹಶೀಲ್ದಾರ್ ಹತ್ತಿರ ಹೋಗಬೇಕು. ಐದು ರೂಪಾಯಿ ಲಂಚ, 10 ರೂಪಾಯಿ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ತೆಗೆದುಕೊಂಡರೆ ಒಂದು ಮೂಟೆ ಸಿಮೆಂಟ್ ಸಿಕ್ಕುತ್ತದೆ. ನಿಮ್ಮ ಘೋಷಣೆ ಸಮಾಜವಾದದ ನಿರೂಪಣೆ. ಜಾತೀವಾರು, ಕೋಮುವಾರು ಭಾವನೆಗಳನ್ನು ಕಡಿಮೆ ಮಾಡುವುದಕ್ಕೆ ಸಮಾಜವಾದವನ್ನು ತಂದಿದ್ದಾರೆ. ಒಂದು ಉದಾಹರಣೆಯನ್ನು ಕೊಡುತ್ತೇನೆ.

5-00 P. M.

ನಮ್ಮ ರಾಷ್ಟ್ರದಲ್ಲಿ ಗೌರಿಶಂಕರ ಶಿಖರ ಅತ್ಯಂತ ಎತ್ತರವಾದ ಶಿಖರ. ಈ ಪದಾರ್ಥಗಳೆಲ್ಲಾ ಸ್ವರ್ಗವನ್ನು ಮುಟ್ಟಿವೆ. ತಾವು ಹೋಗಿ ಅಲ್ಲಿ ಇಟ್ಟುಬಿಟ್ಟಿದ್ದೀರಿ. ಎಷ್ಟು ಜನ ಅಲ್ಲಿಗೆ ಹೋಗಿ ತೆಗೆದುಕೊಳ್ಳಬಹುದು. ಶೇಕಡ 2—3 ಜನ ಆಡಳಿತ ಕಾಂಗ್ರೆಸ್ ಪುಡಾರಿಗಳು ದುಡ್ಡು ಸಂಪಾದನೆ ಮಾಡಿದ್ದರೆ ತೆಗೆದುಕೊಳ್ಳಬಹುದು. ಬಡ ಜನತೆಗೆ ಯಾವ ತರಹ ಉಪಯೋಗವಾಗಿಲ್ಲ. ನೀರಾವರಿ ಹೆಚ್ಚು ಮಾಡುತ್ತೇವೆ, ಆಹಾರೋತ್ಪನ್ನ ಹೆಚ್ಚು ಮಾಡುತ್ತಾ ಇದ್ದೇವೆ ಎಂದು ಘೋಷಣೆಗಳನ್ನು ಹಾಕಿದ್ದಾರೆ. ಕಳೆದ ವರ್ಷದ ರಾಜ್ಯಪಾಲರ ಭಾಷಣವನ್ನು ತೆಗೆದು ನೋಡಿದರೆ, ಸುಮಾರು 2 ಲಕ್ಷ ಎಕರೆ ಎಂದು ಕಾಣುತ್ತದೆ, ಅದನ್ನು ಪೂರೈಸುತ್ತೇವೆ ಎಂದು ಹೇಳಿದ್ದಾರೆ. ಇದು ಕಾರ್ಯಗತವಾಗಿದೆಯೋ ಎಂದು ನೋಡಿದರೆ ಆಗಿಲ್ಲ. ಸುಮ್ಮನೆ ಜನತೆಯು ಮುಂದೆ ಹೇಳುತ್ತಾ ಸುಮ್ಮನೆ ದುಡ್ಡು ಖರ್ಚು ಮಾಡುವುದು, ಹೀಗಾಗಬಾರದು. ಏನು ಹೇಳುತ್ತೀರೋ ಅದನ್ನು ನಡೆಸತಕ್ಕ ಶಕ್ತಿ ಇರಬೇಕು. ನಾನು ಒಂದು ಸಲಹೆ ಕೊಡುತ್ತೇನೆ. ಸಣ್ಣ ನೀರಾವರಿ ಯೋಜನೆಯನ್ನು ಮಾಡಲು ಇಡೀ ರಾಜ್ಯದಲ್ಲಿರುವ ಎಲ್ಲಾ ತಾಲ್ಲೂಕುಗಳನ್ನು ಸರ್ವೆ ಮಾಡಿಸಲಿ, ಸರ್ವೆ ಮಾಡಿಸಿ ಎಲ್ಲಾ ತಾಲ್ಲೂಕುಗಳಲ್ಲಿ ಆದ್ಯತೆಯನ್ನು ಕೊಡಲಿ, ಸಣ್ಣ ನೀರಾವರಿ ಎಂದರೆ ಸಣ್ಣ ಸಣ್ಣ ಕಟ್ಟೆಗಳನ್ನು ಕಟ್ಟುವುದರಿಂದ 5–6 ಎಕರೆ ಜಮೀನನ್ನು ನೀರಾವರಿ ಮಾಡತಕ್ಕ ಯೋಜನೆ ಇದೆ. ಇನ್ನೊಂದು ಸಲಹೆ ಕೊಡುತ್ತೇನೆ. ನಮ್ಮ ಕರ್ನಾಟಕದಲ್ಲಿ ಸಂಪನ್ಮೂಲಗಳಿಗೆ ಕೊರತೆ ಇಲ್ಲ. ಅಧ್ಯಯನ ಮಾಡಿಸಲಿ, ಪಂಚವಾರ್ಷಿಕ ಯೋಜನೆಗಳಿಗೆ

(ಶ್ರೀ ಟಿ. ಎಂ. ಮಂಜುನಾಥ)

ಅನುಗುಣವಾದ ಸಮನ್ವಯವಾದ ಒಂದು ಸರ್ವೆ ಮಾಡಿಸಲಿ. ಯಾವ ಯಾವ ಸಂಪನ್ಮೂಲಗಳನ್ನು ಎಷ್ಟರ ಮಟ್ಟಿಗೆ ನಾವು ಉಪಯೋಗಿಸಿಕೊಂಡರೆ, ನಮ್ಮ ದೇಶದ ಸಂಪತ್ತು, ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆ ಎಂದು ಯೋಚನೆ ಮಾಡಬೇಕು. ಇವತ್ತು ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಕುಸಿದು ಬಿದ್ದಿದೆ, ಎಲ್ಲಾ ಯೋಜನೆಗಳು ತಲೆ ಕೆಳಕಾಗಿವೆ.

ಕಡೆಯದಾಗಿ, ದೇಶದ ಜವಾಬ್ದಾರಿಯನ್ನು ಹೊತ್ತಿರತಕ್ಕ ಮುಖ್ಯ ಮಂತ್ರಿಗಳು ಇದ್ದಾರೆ. ಅವರನ್ನು ಕೇಳಿಕೊಳ್ಳುವುದು ಇಷ್ಟೆ. ಅವರು ರೈತರ ಮಗ ಎಂದು ಹೇಳಿದ್ದಾರೆ. ರಾಗಿ ಮೇಲೆ ಲೆವಿ ಹಾಕಿದ್ದಾರೆ. ನಮ್ಮ ಕಡೆ ರಾಗಿ ಎಕರೆಗೆ 25—30 ಸೇರು ಬಿದ್ದಿದೆ. ಲೆವಿ ಕೊಡಬೇಕು ಎಂದು ಹೇಳಿದ್ದಾರೆ ಇದರಲ್ಲಿ ಅವರು ಇಡೀ ವರ್ಷ ಜೀವನ ಮಾಡಬೇಕು. ಅವರ ಮನೆಗೇ ಸಾಲುವುದಿಲ್ಲ. ಉಳಿದಿದ್ದನ್ನು ಕೊಂಡು ತರಬೇಕು. ಯಾರೋ ನೂರಕ್ಕೆ 10 ಪರ್ಸೆಂಟ್ ನೀರಾವರಿಯಲ್ಲಿ ರಾಗಿ ಬೆಳೆಯಬಹುದು. ರೈತರ ಪರವಾಗಿ ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ರಾಗಿಯ ಮೇಲೆ ಹಾಕಿರತಕ್ಕ ಲೆವಿಯನ್ನು ಮನ್ನಾ ಮಾಡಿ. ನಮ್ಮ ದೇಶದಲ್ಲಿ ಬಡ ರೈತರು ಸುಖವಾಗಿ ಬಾಳಲಿಕ್ಕೆ ಸ್ವಲ್ಪವಾದರೂ ಅವಕಾಶ ಮಾಡಿಕೊಡಿ. ದೇಶದಲ್ಲಿರತಕ್ಕ ಎಲ್ಲಾ ತಾಲ್ಲೂಕುಗಳನ್ನು ಸಣ್ಣ ನೀರಾವರಿಗೆ ಸರ್ವೆ ಮಾಡಿಸಲಿ. ಮಾಸ್ಟರ್ ಪ್ಲಾನ್ ತಯಾರು ಮಾಡಿಸಿ, ಎಲ್ಲಾ ತಾಲ್ಲೂಕುಗಳಲ್ಲಿ ಕಾರ್ಯಕ್ರಮ ಹಾಕಿಕೊಳ್ಳಿ ಎಂದು ಕೇಳಿಕೊಂಡು ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† SRI M VEERAPPA MOILY (Karkal): Madam Speaker, the Address of the Governor of Karnataka represents the review of the achievements of our Government and the prospects held out to the common man in the State. I should first of all congratulate the Government because of its very strong leadership and some of the symbols which I will narrate in my speech will show that definitely we have a stable Government and under that stable Government we could achieve things which we could not have dreamt of. The first symbol is the naming of Mysore State as Karnataka State. Some may feel that it is only a symbolic change. The political leaders who ruled this State thought by this change their Government would

collapse and the people may agitate because there was some tradition and that tradition still continued. By this change, this Government has removed that symbol of the previous rulers. I should congratulate the Government for this. because the integration started only after the change in name of the State. After this, our Government has passed a very important amendment Act, viz., the Mysore Land Reforms Act. We had a Land Reforms Act in 1961. But, that was an Act which could not be implemented. Our Government thought that actual implementation cannot be done unless proper amendments are made. But at what cost? I do not think any weak Government could have introduced an amendment of the kind to remove the feudal tradition of many landlords who are indirectly holding the reins of power in the State. I should say that this is a very important step, because about 4 to 5 lakhs of people are freed from the cluches slavery which was in existance.

Now, I think, I should say something about the back ground against which we gained our Independence, and how our Government has acted in the common man's point view and what we have achieved in this direction. We all know and we have to admit that in the western countries which gained their independence, political independence was the product of Social and political revolution. But our independence was based upon social and economic revolution. It is only political independence we gained, leaving behind social and economic revolution which we have yet to earn by way of these democratic institutions. And for this purpose, we have to work for necessary legislation. In these 26-27 years, we have done nothing in this direction I should say that this Government has started doing these things one by one. I do think that the Mysore Land Reforms Amendment Act is just one small step in this direction. I should say it is a very boldstep which will bring solace to the common people. About the implementation of the Land Reforms Act, the atmosphere has definitely changed. I know that

(SRI M. V. MOILY)

I am also an Advocate dealing with these matters. When I entered the profession, I found all these people coming to me, thousands of tenants cases involving forcible dispossession thnre used to huts in which people were living, next morning, these huts were non-existent. Now I find there may be only stray instances, one or two. I think this is an important achievement which this Government has gained by creating proper conditions favourable to tenants in the State.

I should also state that about slum clearance and clearing of the debt. This is also yet another bold step taken by our Government, and in fact within a matter of a few months, they should remove this symbol another slavery. I think this is also important, step.

Coming to education, Government has appointed a committee and I learn from the papers that they have suggested administrative reforms. This is not just sufficient. I suggest that it is necessary that our Government should come out by appointing a Commission or Committee to prepare an infrastructure of education, because the present system of education which is there cannot deliver the goods at all for the people Of course, we are going to give mass education. We find that the education given to students, of course, has produced in them an attitude favourable to agitations. I am alarmed by the attitude shown by some of the political leaders in deciding issues. As a result of mass education, we find many of the students indulge in this sort of agitations, misguided by politicians, towards the lapses of the Government. We know that the Government is a very small sector in India which provides employment and it is a very small sector which give programmes which effect a very small sector of economy.. There are other sectors, private banks and private industries emploing more man power than the Government, and yet no

agitations are levelled against these major sectors which provide more employment and which can solve major economic problems. I should rather request the Hon. Members of the Opposition if they like, to start movements and agitations against these vested interests, against these major sectors of economy which are exploiting the country.

Another trend that we find from the press is, we are repeating our feudal wards we had during the period feudal lords. What we find is that when a feudal lord comes into power, agitations are started to remove that power instead of removing social evils which result in the exploitation of people. We are repeating that history in India by removing the leader or the man in power. They revolt against the authority. The Maharashtra border problem is nothing but a revolt against the authority, instead of revolting against the problem which is confronting us. It some what recalls to my mind the days of feudal lords in Ingland during the reign of Henry VIII. They wanted to revolt against the king Henry. They gathered in particular places and started quarrelling among themselves in distributing countries which country goes to which person, instead of concentrating their efforts on the removal of the King. One deudal lord said whether that country goes to him or to another feudal lord, it does not matter. We only are required now to unite against the King against whom we are fighting, and only when we succeed in defeating the King, then only the question of distributing counties amongst ourselves will arise. This sort of a thing is now going on in India. Belgaum problem is just an example of this sort of disposition. In a democratic set up, whether it is the opposition parties or whether it is the Government our aim should be to fight the causes of the common man, to fight cause against the evils of society instead of fighting only for the removal of authority which is in power. By this method, we are only destroying the democratic setup that we have built during the last 27 years.

(SRI M. V. MOILY)

I also suggest that Government should undertake some sort of investigation to see that the revolt against the authority of the Government against the democratic set up is put down stringently and our effort should be to strengthen the hands of the Government.

Coming to our South Kanara district, last time, the food problem was very severe. I should congratulate our Leader, the Chief Minister for dealing with the matter firmly and we soon got out of the trouble. Last time, there was a big agitation to remove the ban which was there. Of Course Government stood very firm, because they knew that if the ban was removed the problem would not be solved. Government stood firm and the Chief Minister, by the action which he took, was able to solve the problem and save the situation. Now also, the merchants who could not find a favourable opportunity, they are agitating over the ban, and saying that the ban should be removed. If the problem could be solved by removing the ban, we welcome it. From our experience,, we have learnt that out merchants are not trustworthy and they cannot deal with the matter. So only so long as the ban is not removed and bulk supplies of foods are rushed to our district, prices will definitely come down, because rice is there, but it is hoarded by the merchant class.

With this, I close my speech thanking the Hon. Chair.

ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ) .—ಸನ್ಮಾನ್ಯ ಸಭಾಧ್ಯಕ್ಷಣೀಯರೇ, ನಾನು ಯಾವುದನ್ನು ಮಾತನಾಡಬಾರದೆಂದು ತಿಳಿದುಕೊಂಡು ವಿಚಾರ ಮಾಡು ತ್ತಿದ್ದೆನೋ ಅದನ್ನೇ ವಿಚಾರ ಮಾಡುವಂಥ ಪ್ರಸಂಗ ಬಂದುದಕ್ಕಾಗಿ ಅತ್ಯಂತ ವೇದನೆಯಾಗುತ್ತಿದೆ. ನಾನು ಎದ್ದ ಕೂಡಲೇ ದುಷ್ಕಾಲದ ಬಗ್ಗೆ ಮಾತನಾಡು ತ್ತಾನೆ ಎಂಬ ಹೆಸರು ಆಗಿದೆ. ನಾನು ಇಲ್ಲಿಗೆ ಬರುವ ಕಾಲಕ್ಕೆ ನಮ್ಮ ಡೆಪ್ಯುಟಿ ಕಮಿಷನರ್‌ರವರು ದುಷ್ಕಾಲದ ಹೆಸರು ತೆಗೆಯಬೇಡಿ ಎಂದರು. ನಾನು ಒಂದು

ನಮ್ರತೆಯಿಂದ ಸೂಚಿಸಬಯಸುತ್ತೇನೆ. ಗವರ್ನರ್ ಭಾಷಣ ಆದಕೂಡಲೇ ಅನಿವಾರ್ಯವಾಗಿ ಅದನ್ನು ನಾವು ವಿರೋಧಿಸಬೇಕಾಗುತ್ತದೆ ಅದರಲ್ಲಿ ಯಾವ ಸತ್ಯಾಂಶಗಳೂ ಇಲ್ಲ. ಒಂದು ಭಾಷಣವನ್ನು ಓದಬೇಕು, ಬಡ್ಜೆಟ್‌ನಲ್ಲಿ ಯಾವುದಾದರೂ ಹೇಳಬೇಕಾಗುತ್ತದೆ, ಹೇಳಿದ್ದನ್ನು ಸಮರ್ಥನೆ ಮಾಡಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ನಾವು ವಿರೋಧ ಪಕ್ಷದವನಾಗಿ ವಿರೋಧ ಮಾಡಬೇಕು ಎನ್ನುವ ದೃಷ್ಟಿಕೋನ ಇಟ್ಟುಕೊಂಡಿರುವ ಮನುಷ್ಯನಲ್ಲ. 63 ಕೋಟಿ ರೂಪಾಯಿ ಬರಗಾಲಕ್ಕಾಗಿ ಖರ್ಚು ಮಾಡಿರುವುದು, ರಾಜ್ಯ ಸರಕಾರವೇ ಕೊಟ್ಟಿರಲಿ, ಭಾರತ ಸರ್ಕಾರವೇ ಕೊಡಲಿ ಅದು ತಾತ್ಪೂರ್ತಿಕವಾಗಿ, ದುಷ್ಕಾಲದ ಸಲುವಾಗಿ ಖರ್ಚು ಆಗಿರುವ ಹಣ, ಇಷ್ಟು ಹಣ ಬೀದರ್ ಗುಲ್ಬರ್ಗಾಗಳಿಗಾಗಿ ಖರ್ಚು ಆಯಿತು ಎಂದು ಕೆಲವು ಸ್ನೇಹಿತರು ಮಾತನಾಡಿದರು. ಹಳೆ ಮೈಸೂರಿನ ಕಡೆ ಇಷ್ಟು ಖರ್ಚು ಮಾಡಲಿಲ್ಲ ಎನ್ನತಕ್ಕಂಥ ಆರೋಪಣೆಯನ್ನು ಮಾನ್ಯ ಮುಖ್ಯ ಮಂತ್ರಿಯವರು ಹೊರಬೇಕಾಗುತ್ತದೆ ನಾನು ಮುಂಬೈ ಅಸೆಂಬ್ಲಿಯಲ್ಲೂ ಇದ್ದೆ, ಬ್ರಿಟಿಷ್ ಸರ್ಕಾರದವರು ಇದ್ದ ಕಾಲಕ್ಕೂ ತಿಳುವಳಿಕೆ ಇತ್ತು ತಾತ್ಪೂರ್ತಿಕವಾಗಿ ದುಷ್ಕಾಲದ ಸಲುವಾಗಿ, ಬ್ರಿಟಿಷ್ ಸರ್ಕಾರದವರು ಖಾಯಂ ಯೋಜನೆಯನ್ನು ಮಾಡಲಿಲ್ಲ. ಮುಂಬೈ ರಾಜ್ಯದವರು ಸಹ ಈ ಬೀದರ್ ಜಿಲ್ಲೆ ಕರ್ನಾಟಕಕ್ಕೆ ಸೇರಿ ಹೋಗತಕ್ಕಂಥೆಂದು, ಇವರಿಗೆ ಕಲ್ಯಾಣ ಮಾಡಬಾರದೆಂದು ಅವರು ಖಾಯಂ ಯೋಜನೆಯನ್ನು ಮಾಡಲಿಲ್ಲ.

ಶಿವಮೊಗ್ಗ ಡಿಸ್ಟ್ರಿಕ್ಟ್‌ನ ಸದಸ್ಯರುಗಳು ಮಲೆನಾಡು ಅಭಿವೃದ್ಧಿ ಮಂಡಲಿ ಮಾಡಬೇಕು ಎಂಬ ಸೂಚನೆಯನ್ನು ಮಾಡುತ್ತಿದ್ದಾರೆ. ನಮಗೆ ಬದುಕುವುದಕ್ಕೆ ಒಂದು ದುಷ್ಕಾಲ ಬೋರ್ಡ್ ಮಾಡಿರಿ ಎಂದು ಹೇಳುತ್ತೇನೆ. ಉತ್ತಮ ಶಿಕ್ಷಣಕ್ಕಾಗಿ ಒಂದು ಬೋರ್ಡ್‌ಮಾಡಿ ಎಂದು ಹೇಳುತ್ತಿದ್ದಾರೆ. ಇವತ್ತು ಕೋಲಾರ, ಚಿತ್ರದುರ್ಗ ಬಳ್ಳಾರಿ ಜಿಲ್ಲೆಗಳು ದುಷ್ಕಾಲಕ್ಕೆ ಈಡಾಗುತ್ತಿರುತ್ತವೆ ಆದರೆ ಪ್ರಾಮುಖ್ಯವಾಗಿ ಬಿಜಾಪುರ ಜಿಲ್ಲೆಯನ್ನು ತೆಗೆದುಕೊಂಡರೆ ನಮ್ಮ ಭಾರತದ ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡರೆ ಕರ್ನಾಟಕ ರಾಜ್ಯದಲ್ಲಿ ಅಲ್ಲ ಇಡೀ ಭಾರತದಲ್ಲೇ 500-600 ವರ್ಷಗಳ ಕಾಲದಿಂದ ದುಷ್ಕಾಲ ಬಿದ್ದಿದೆ ಹೆಣಗಳನ್ನು ಎತ್ತುವುದಕ್ಕೆ ಗೋರಿಗಳನ್ನು ತೆಗೆಯಲಿಕ್ಕೂ ಜನರು ಇರಲಾರದಂಥ ಪರಿಸ್ಥಿತಿ ಇತ್ತು. ಆದುದರಿಂದ ಇವತ್ತು ನಾನು ಮುಖ್ಯಮಂತ್ರಿಗಳನ್ನು ದುಷ್ಕಾಲ ಬಗೆಹರಿಸುತ್ತೀರೋ ಇಲ್ಲವೋ ಎಂದು ನೇರವಾಗಿ ಪ್ರಶ್ನೆಯನ್ನು ಹಾಕಬೇಕಾಗುತ್ತದೆ. ನೀವು ಏನು ಮಾಡಿದ್ದೀರಿ? ಜವರ್ಗಿಯಲ್ಲಿ 25ನೇ ತಾರೀಖು ಪರಿಷತ್ತು ಕೂಡಿತ್ತು ಅವರು ಹೇಳಿದರು, ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಆಸಕ್ತಿ ವಹಿಸಬೇಕು, ವಹಿಸಿದೆಯೋ ಇಲ್ಲವೋ ಎಂದು ಅಲಿಗೇಷನ್ ಮಾಡುವ ರೀತಿಯಲ್ಲಿ ಜವರ್ಗಿ ಜಿಲ್ಲಾ ಪರಿಷತ್ತಿನಲ್ಲಿ ಠರಾವು ಆಯಿತು ಎಂದು ಸ್ಪಷ್ಟವಾಗಿ ನಮ್ರತೆಯಿಂದ ಹೇಳುತ್ತೇನೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನ್ನು ಎಂದು ಮುಗಿಸಿಕೊಡುತ್ತೀರಿ, ಎಷ್ಟು ಹೆಕ್ಟಾರ್‌ಗಳಿಗೆ ನೀರು ಉಣಿಸುವಂತೆ

(ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ)

ಮಾಡುತ್ತೀರಿ ಎಂದು ನೇರವಾಗಿ ಪ್ರಶ್ನೆ ಕೇಳುತ್ತಿದ್ದೇನೆ. ಲಗ್ನ ಮಾಡುತ್ತೇನೆ ಎಂದು ಹೇಳಿ ಗೋರಿಗೆ ಹೋಗುವ ಸಮಯ ಬಂದರೂ ಆ ಕಾರ್ಯವನ್ನು ಮಾಡಿಲ್ಲ ಎಂದು ಸ್ಪಷ್ಟವಾಗಿ ಮಂತ್ರಿಗಳಿಗೆ ಹೇಳುತ್ತಿದ್ದೇನೆ.

ಇನ್ನು, ನೇಕಾರರ ಸಮಸ್ಯೆ, ಅವರ ಬಗ್ಗೆ ಏನು ಕಾರ್ಯಕ್ರಮ ತಮ್ಮ ಮುಂದೆ ಇದೆ, ಸಿಂದಗಿ ಇಂಡಿಗೆಯ ಇವತ್ತಿನ ಪರಿಸ್ಥಿತಿ ತಮಗೆ ಗೊತ್ತಿಲ್ಲ, ಹೋದ ವರ್ಷ ಅನಾವೃಷ್ಟಿ ಆದರೆ ಈ ವರ್ಷ ಅತಿವೃಷ್ಟಿಯಾಗಿ ಈ ವರ್ಷ ನೀರು ಹೋಯಿತು ಮಳೆಯಾಗಲಿಲ್ಲ ಹತ್ತಿ ಬೆಳೆ ಎದೆಮಟ್ಟ ಬೆಳೆದು ಬಂದಿತ್ತು ಅದು ಒಣಗಿ ಹೋಯಿತು ಅದೇ ರೀತಿ ಜೋಳ ಬೆಳೆ ಸಹ ಹೋಯಿತು ಕುಸುಬಿಗೆ ಹುಳ ಬಿದ್ದು ಹೋಯಿತು. ಕುಸುಬಿ ಸಹ ಬರಲಿಲ್ಲ. 50 ಚೀಲ ಆಗಬೇಕಾಗಿದ್ದುದು 20 ಚೀಲ ಆಗುವ ಪರಿಸ್ಥಿತಿ ಇದೆ. ಕೊನೆಯದಾಗಿ ಲೆವಿಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ ಸರ್ಕಾರದವರು ಯಾವ ಕಾರಣದಿಂದಲೋ ಫರ್ಟಿಲೈಜರ್ಸ್‌ನ್ನು ಕೊಡಲಿಕ್ಕೆ ಆಗಲಿಲ್ಲ. ಫುಡ್ ಪ್ರಾಬ್ಲಂನ್ನು ಬಿಡಿಸುವ ಸಲುವಾಗಿಯೂ ಒಂದು ಕಾರ್ಯಕ್ರಮ ಇರಬೇಕಾಗಿತ್ತು. ಮಾನ್ಯ ಚನ್ನಬಸಪ್ಪನವರು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಮಾಡುತ್ತೇವೆಂದು ಹೇಳಿದರು ಅದರಿಂದ ನಮಗೆ ಅಷ್ಟು ಪ್ರಯೋಜನವಾಗುವುದಿಲ್ಲ ನಮ್ಮ ಬಿಜಾಪುರ ಜಿಲ್ಲೆ ಉತ್ತರ ಭಾಗದಲ್ಲಿ ಇದೆ, ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಿಂದ ಸಿಂದಗಿ, ಇಂಡಿಗಿಗೆ ಅಷ್ಟು ಪ್ರಯೋಜನವಾಗುವುದಿಲ್ಲ. ಈ 3-4 ಏರಿಯಾಕ್ಕೆ ಪ್ರಯೋಜನವಾಗಬೇಕಾದರೆ ದೊಡ್ಡ ಪ್ರಾಜೆಕ್ಟ್ ಮಾಡಬೇಕು. ಇರಿಗೇಷನ್ ವೆಲ್ಸ್‌ನ್ನು ಏನು ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ ಹೊಸ ಭಾವಿಗಳನ್ನು ತೋಡಿಸುವುದಕ್ಕೆ ಬದಲಾಗಿ, 15 ಸಾವಿರ ಭಾವಿಗಳು ಇಂಡಿಗಿ ಮತ್ತು ಸಿಂದಗಿ ತಾಲ್ಲೂಕ್‌ಗಳಲ್ಲಿ ಇವೆ ಕನಿಷ್ಟ ಪಕ್ಷ 8-10 ಸಾವಿರ ಭಾವಿಗಳಿಗಾದರೂ ಆಳ ತೆಗೆಸುವ ಒಂದು ವ್ಯವಸ್ಥೆ ಮಾಡಿಸಿ ಎಂದು ಮುಖ್ಯಮಂತ್ರಿಗಳು ಬಿಜಾಪುರಕ್ಕೆ ಬಂದಾಗ ಹೇಳಿದೆ. ಡಿ ಸಿ. ಯವರು ಹೇಳಿದರು, ರಿಪೋರ್ಟ್ ಬರಲಿಲ್ಲ ಏನು ಆಯಿತೋ ಅದರ ಸಲುವಾಗಿ ಒಂದು ಕಾರ್ಯಕ್ರಮವನ್ನು ಸ್ಪಷ್ಟವಾದ ರೀತಿಯಲ್ಲಿ ಹಾಕಿ, 63 ಕೋಟಿ ಏನು ಖರ್ಚು ಮಾಡಿದಿರಿ ಅದರಲ್ಲಿ 10 ಕೋಟಿ ಸಿಂದಗಿ, ಇಂಡಿಗಿಗೆ ಅಲಾಟ್ ಮಾಡಿ ಕೊಡಿರಿ ಸರ್ಕಾರದ ಪರಿಸ್ಥಿತಿ ತೊಂದರೆ ಇದ್ದರೆ, ಸಾಲ ಮಾಡಿ ತರಲಿಕ್ಕೆ ಈ ಸರ್ಕಾರ ಬಹಳ ರೂಢಿ ಇರುವ ಸರ್ಕಾರ, ಲೋನ್ ಆದರೂ ಮಾಡಿ ಸಾಲವನ್ನು ತೆಗೆದುಕೊಂಡು ಬಂದು ಅದಕ್ಕೆ 5 ಇದಕ್ಕೆ 5 ಖರ್ಚು ಮಾಡಿದರೆ 5-6 ವರ್ಷದೊಳಗೆ ಈ ದುಷ್ಕಾಲದ ಸಮಸ್ಯೆ ತಪ್ಪುತ್ತದೆ ಎಂದು ಹೇಳುತ್ತೇನೆ. ಇತ್ತೀಚಿನ ಧೋರಣೆಗಳಿಂದ ಏನು ಗೊತ್ತಾಗುತ್ತದೆಂದರೆ ವಿನೋಬಾ ಭಾವೆಯಂಥವರು ಸತ್ಯಾಗ್ರಹ ಮಾಡಬೇಕು ನಮ್ಮಂಥವರು ಮಾಡುವುದು ಯೋಗ್ಯವಲ್ಲವೆಂಬ ಪ್ರಾಮಾಣಿಕ ಅಭಿಪ್ರಾಯವಿದೆ,

ಸರ್ಕಾರದವರ ಈಗಿನ ಧೋರಣೆಯನ್ನು ನೋಡಿದರೆ ನಾವು ಸತ್ಯಾಗ್ರಹ ಮಾಡಬೇಕಾಗುತ್ತದೆಂದು ಹೇಳುತ್ತೇನೆ, ಹಾಗೂ ಸರ್ಕಾರಕ್ಕೆ ಈ ರೀತಿಯ ಅನಿವಾರ್ಯವಾದಂಥ ಪರಿಸ್ಥಿತಿಯನ್ನು ಒದಗಿಸಿಕೊಡಬೇಕಾಗುತ್ತದೆ. ಲೆವಿ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ, ನೀವು ರೈತರಿಂದ ಜೋಳ ತೆಗೆದುಕೊಳ್ಳುತ್ತೀರಿ, ಭತ್ತ ತೆಗೆದುಕೊಳ್ಳುತ್ತೀರಿ, ಅವರಿಗೆ ಸರಿಯಾದ ಧಾರಣೆ ಕೊಡಿ ಮತ್ತು ಅವರಿಗೆ ಗೊಬ್ಬರವನ್ನು ಸಹ ಸರಿಯಾಗಿ ಒದಗಿಸುವ ಏರ್ಪಾಡು ಮಾಡಿ. ರೈತರು ಸೊಸೈಟಿಗಳಲ್ಲಿ ಸಾಲ ಮಾಡಿಕೊಂಡಿರುತ್ತಾರೆ ಅವರು ಆ ಸಾಲದ ಹೊರೆಯಿಂದ ವಿಮುಕ್ತವಾಗಬೇಕಾದರೆ ನೀವು ಅವರಿಗೆ ಹೆಚ್ಚಿನ ಧಾರಣೆ ಕೊಡಿ, ಬಡ ರೈತರು ತೃಪ್ತಿ ಅಗಬೇಕಾದರೆ ಸಬ್‌ಸೀಡಿ ಹೆಚ್ಚು ಮಾಡಿ, ಬಡರೈತನಿಗೆ ಹೆಚ್ಚು ತೊಂದರೆ ಕೊಡಬಾರದು.

5-30 P. M.

ಇನ್ನು ಶಿಕ್ಷಣ ಕ್ಷೇತ್ರದಲ್ಲಿ ಒಂದು ವಿಷಯ ಮಾತನಾಡುತ್ತೇನೆ. ಈವೊತ್ತಿನ ದಿವಸ ಶಿಕ್ಷಣ ಕ್ಷೇತ್ರದಲ್ಲಿ ಎಲ್ಲರೂ ಅಂಜತಕ್ಕ ಕಾಲ ಬಂದಿದೆ. ಆದರೆ ಹೈಸ್ಕೂಲ್ ವಿಚಾರ ನನಗೆ ಚೆನ್ನಾಗಿ ಗೊತ್ತಿಲ್ಲ. ಪ್ರಾಥಮಿಕ ಶಿಕ್ಷಣದ ಬಗ್ಗೆ ಹೇಳುವುದಾದರೆ 5-5 ಮಂದಿ ಹುಡುಗರಿಗೆ 7-7 ಮಂದಿ ಮಾಸ್ಟರ್ಸ್ ಇದ್ದಾರೆ. ಅಲ್ಲದೆ ಈ ಶಿಕ್ಷಣ ಕ್ಷೇತ್ರಕ್ಕೆ ಸಾಲ ತಂದು ಖರ್ಚು ಮಾಡುವ ಬದಲು ಅವನಿಗೆ ಜೀವನೋಪಾಯಕ್ಕೆ ಆಗುವಂಥ ವಿದ್ಯಾಭ್ಯಾಸ ಮಾಡಿಕೊಡಬೇಕು. ನಾವು ಎಂ. ಎಲ್. ಎ. ಗಳು ಇರಬಹುದು, ಮಂತ್ರಿಗಳಾಗಿ ಇರಬಹುದು, ಅದನ್ನು ಕೇಳುವವರು ಯಾರು? ಈವೊತ್ತು ವಿದ್ಯಾರ್ಥಿಗಳು ಏನು ಕೇಳುತ್ತಾರೆ ಎಂದರೆ ನೀವು ಒಂದು ಸಾವಿರ ರೂಪಾಯಿ ತೆಗೆದುಕೊಳ್ಳಿರಿ, ನಮಗೆ ಜೀವನಕ್ಕೆ ಒಂದು ಹಾದಿ ತೋರಿಸಿಕೊಡಿರಿ ಎಂದು ಕೇಳುತ್ತಾರೆ ಆದುದರಿಂದ ನನ್ನ ಅಭಿಪ್ರಾಯ ಏನೆಂದರೆ ಈವೊತ್ತಿನ ದಿವಸ ಶಿಕ್ಷಣ ಕ್ಷೇತ್ರದಲ್ಲಿರತಕ್ಕಂಥ ಮೂಲ ಪದ್ಧತಿಯೇ ಬದಲಾವಣೆಯಾಗಬೇಕು ಎಂದು ಹೇಳುತ್ತೇನೆ.

ಇನ್ನು ಮಾನ್ಯ ಸಿದ್ಧವೀರಪ್ಪನವರಿಗೆ ಒಂದು ಮಾತನ್ನು ಹೇಳುತ್ತೇನೆ. ಅವರು ತಮ್ಮ ಕ್ಯಾಬಿನೆಟ್ ಕೆಲಸ ಕಾರ್ಯಗಳ ಕಡೆಗೆ ಗಮನ ಕೊಡುವ ಬದಲು ನಮ್ಮ ದೇಶದ ಅನಾಥ ಬಾಲಕರ ಕಡೆ ಗಮನಕೊಡಬೇಕು ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿರತಕ್ಕಂಥ 3 ಕೋಟಿ ಜನರಲ್ಲಿ ಕೆಲವರು ವ್ಯವಸಾಯವನ್ನು ಅವಲಂಬಿಸಿದ್ದಾರೆ, ಕೆಲವರು ಕೈಗಾರಿಕೆಯನ್ನು ಅವಲಂಬಿಸಿದ್ದಾರೆ ಇನ್ನು ಕೆಲವರು ತಮ್ಮ ವೃತ್ತಿಯಲ್ಲಿರುವ ಕೆಲಸಗಳನ್ನು ಅವಲಂಬಿಸಿದ್ದಾರೆ, ಇವರುಗಳ ಬಗ್ಗೆ ತಾವು ಏನೇನು ಕಾರ್ಯ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳಿರಿ. ಮಾನ್ಯ ಸಿದ್ಧವೀರಪ್ಪನವರು ಈ ವಿಷಯದತ್ತ ಕಡೆ ಗಮನ ಕೊಡದೆ ನಿನ್ನೆ ಏನು ಹೇಳಿದರು ಎಂದರೆ ಯು.ಪಿ.ಯಲ್ಲಿ ಚುನಾವಣೆ ಆಗಿರುವುದನ್ನು ನೋಡಿರಿ, ಒರಿಸ್ಸಾದಲ್ಲಿ ಚುನಾವಣೆ ಆಗಿರುವುದನ್ನು ನೋಡಿರಿ, ಇಷ್ಟಾದರೂ ನಮ್ಮ ನಮ್ಮ

(ಶ್ರೀ ಎಸ್. ವೈ. ಪಾಟೀಲ್)

ಬಿನ್ನಾಭಿಪ್ರಾಯಗಳನ್ನು ಮರೆತು ಒಂದಾಗಲೂ ಬನ್ನಿರಿ ಎಂದು. ಆದರೆ ನಾನು ಹೇಳುವುದು ಏನೆಂದರೆ ನಾವು (ಆರ್) ಕಾಂಗ್ರೆಸ್‌ನಲ್ಲೇ ಇರಲಿ, ಅಥವಾ (ಓ) ಕಾಂಗ್ರೆಸ್‌ನಲ್ಲೇ ಇರಲಿ ಅಥವಾ ಸಮ್ಮಿಶ್ರ ಸರ್ಕಾರದಲ್ಲೇ ಇರಲಿ, ಮಂತ್ರಿ ಮಂಡಲದ ಹೊರಗಿನ ಭಾವವಾಗಲಿ ಅಥವಾ ಒಳಗಿನ ಭಾವವಾಗಲಿ ಯೋಚನೆ ಮಾಡುವ ಬದಲು ಜೀವಂತವಾಗಿರುವವರ ಬಗ್ಗೆ ಯೋಚನೆ ಮಾಡಬೇಕೇ ಹೊರತು ಎಲೆಕ್ಷನ್ ಸುದ್ದಿ ಏತಕ್ಕೆ ಹೇಳುತ್ತೀರಾ ? ಎಂ. ಎಲ್.ಎ.ಗಳ ಬಗ್ಗೆ ಯೋಚನೆ ಮಾಡುವ ಬದಲು ಬಡವನು ಬದುಕುವ ಕಡೆ, ಅವನನ್ನು ಉದ್ಧಾರ ಮಾಡುವ ಕಡೆ ಯೋಚನೆ ಮಾಡಿರಿ ಎಂದು ಹೇಳುತ್ತೇನೆ. ಈ ವಿಚಾರವನ್ನು ನಾನು ಹಾಸ್ಯಾಸ್ಪದವಾಗಿ ಹೇಳುತ್ತೇನೆ ಎಂದು ತಿಳಿದುಕೊಳ್ಳಬೇಡಿರಿ, ಇಲ್ಲಿ ಕೂತುಕೊಂಡು ಸುಳ್ಳು ಹೇಳ ಬೇಡಿರಿ ಆ ಬಡವರನ್ನು ಉದ್ಧಾರ ಮಾಡುವ ಕಡೆ ಯೋಚನೆ ಮಾಡಿರಿ ಇಲ್ಲದೇ ಹೋದರೆ ಮುಂದೆ ಏನು ಪರಿಸ್ಥಿತಿ ಬರುತ್ತದೆ ಎಂದು ನೋಡಿರಿ, ನಾನು ಹೀಗೆ ಹೇಳುತ್ತಿದ್ದೇನೆಂದು ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿರಿ, ಅವರ ಕಡೆ ಗಮನ ಕೊಡದೇ ಹೋದರೆ ಚರ್ಮ ಕೈಕಾಲುಗಳು ಹುಳಿತುಕೊಂಡ ರೋಗಿಗಳು ಏನು ಇರುತ್ತಾರೋ ಅದಕ್ಕಿಂತಲೂ ಮಹಾರೋಗಿಗಳಾಗಿ ಆಗುತ್ತೀರಿ ಎಂದು ಹೇಳುತ್ತೇನೆ.

ಇನ್ನು ಹರಿಜನರ ಬಗ್ಗೆ ಒಂದು ವಿಷಯ ಹೇಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಎಲ್ಲೆಲ್ಲಿ ಹರಿಜನರು ಇರುತ್ತಾರೋ ಅಲ್ಲಿ ಅವರವರಲ್ಲೇ ಅವಹೇಳನ ಅವಮಾನವಾಗುತ್ತಿದೆ. ಅವರವರಲ್ಲೇ ಜಗಳವಾಗುತ್ತಿದೆ. ಅವರಲ್ಲಿ ಏಕಮತೆ ಇಲ್ಲ. ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ ಅವರು ಯಾವಾಗಲೂ ಈ ಬಗ್ಗೆ ಹೇಳುತ್ತಿದ್ದಾರೆ. ಈವೊತ್ತಿನ ದಿವಸ ಅವರವರಲ್ಲೇ ಎಡಗೈ, ಬಲಗೈ ಎಂದು ಕೊಂಡು ತ್ರಾಸ ಕೊಡುತ್ತಿದ್ದಾರೆ. ಆದುದರಿಂದ ಇದೇನು ಇದು ಹಿಂದೂಗಳು ಮಾಡಿದ ಪಾಪವೇನು ಎಂದು ನಾನು ಕೇಳುತ್ತೇನೆ. ಉದಾಹರಣೆಗೆ ಬಾಗೇವಾಡಿ ತಾಲ್ಲೂಕಿನಲ್ಲಿ ಮಾರ್ತಪ್ಪನಹಳ್ಳಿ ಅಂತ ಒಂದು ಊರು ಇದೆ. ಅಲ್ಲಿ ಮಾದಿಗರು ಒಂದು ಬಾವಿ ಮಾಡಿಕೊಂಡಿದ್ದಾರೆ, ಅದಕ್ಕೆ ಎಡಗೈನವರು ಮಣ್ಣು ತೆಗೆದು ಕೊಂಡು ಬಂದು ಮುಚ್ಚುತ್ತಾ ಇದ್ದಾರೆ. ಮಹಾತ್ಮಾ ಗಾಂಧಿಯವರು ಹರಿಜನ ಬಗ್ಗೆ ಏನು ಕೆಲಸ ಮಾಡುತ್ತಾ ಇದ್ದರು ಎನ್ನುವುದು ನನಗೆ ಗೊತ್ತಿದೆ. ಈ ತರಹ ಪರಿಸ್ಥಿತಿ ಅಲ್ಲಿರುವುದರಿಂದ ಏನು ಮಾಡಬೇಕು ಹೇಳಿ. ಇನ್ನು ಆ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ.

ಇನ್ನು ನಮ್ಮ ರಾಜ್ಯದ ಇರಿಗೇಷನ್‌ಗಾಗಿ ವರ್ಲ್ಡ್ ಬ್ಯಾಂಕ್‌ನಿಂದ ಸಾಕಷ್ಟು ಹಣವನ್ನು ತರುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿ

ದ್ದಾರೆ. ಈ ಮೈನರ್ ಇರಿಗೇಶನ್ ಬಗ್ಗೆ ನಮ್ಮ ಜಿಲ್ಲೆಯ ಸಿಂದಗಿ ಮತ್ತು ಇಂಡಗಿ ತಾಲ್ಲೂಕಿನ ಪರಿಸ್ಥಿತಿ ಬಗ್ಗೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಮೈನರ್ ಇರಿಗೇಷನ್ ಮಾಡಲು ಸಾಕಷ್ಟು ಸ್ಕೋಪ್ ಇಲ್ಲ. ಆದುದರಿಂದ ಅಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಕೆಲಸ ತೆಗೆದುಕೊಂಡು ಮಾಡಿರಿ. ಇದಕ್ಕೆ ನಮಗೆ ರಾಧಾಕೃಷ್ಣ ಅಂಥ ಮಹಾನುಭಾವರ ರೆಕಮೆಂಡೇಷನ್ ಬೇಡ. ನೀವು ಇದಕ್ಕಾಗಿ ಕೇಂದ್ರ ಸರಕಾರದಲ್ಲಿ ಸಾಲವನ್ನಾದರೂ ತಗೆದುಕೊಳ್ಳಿರಿ, ಗ್ರಾಂಟ ನ್ನಾದರೂ ತೆಗೆದುಕೊಳ್ಳಿರಿ. ಹಿಂದೆ ನಮ್ಮ ಮುಖ್ಯ ಮಂತ್ರಿಗಳು ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಕೆಲಸವನ್ನು ಆದಷ್ಟು ಜಾಗ್ರತೆ ಮುಗಿಸುತ್ತೇವೆಂದು ಭರವಸೆ ಕೊಟ್ಟಿದ್ದರು. ಅಲ್ಲಿ ಈಗ ಆಗುತ್ತಾ ಇರತಕ್ಕಂಥ ಕೆಲಸ ನೋಡಿದರೆ ಬಹಳ ನಿಧಾನವಾಗಿ ಆಗುತ್ತಾ ಇದೆ. ಇದರಿಂದ ಮನಸ್ಸಿಗೆ ಬಹಳ ಅಸಂತೋಷವಾಗಿದೆ. ಆದುದರಿಂದ ನಾನು ಹೇಳುವುದು ಏನೆಂದರೆ ನಮ್ಮ ಕಡೆ ಎಲ್ಲರಿಗೂ ಒಂದೊಂದು ಬಾವಿ ಮಾಡಿಸಿಕೊಡಿರಿ ಎಂದು ಹೇಳುತ್ತೇನೆ. ಇದಕ್ಕಾಗಿ ನೀವು 10 ಕೋಟಿ ರೂಪಾಯಿಯನ್ನಾದರೂ ಹೊರಗಡೆಯಿಂದ ಸಾಲವನ್ನು ತೆಗೆದುಕೊಂಡು ಬನ್ನಿರಿ. ನಾವು ಬೇಡವೆನ್ನುವುದಿಲ್ಲ, ನೀವು ಆ ರೈತರಿಗೆ ಒಂದು ಒಂದು ಸ್ಪೆಷಲ್‌ಲೋನ್ ಆದರೂ ಕೊಟ್ಟು ನೀರಾವರಿ ಬಾವಿಗಳನ್ನು ಇಂಪ್ರೂ ಮಾಡುವುದಕ್ಕೆ ಸಹಾಯ ಮಾಡಿರಿ. ಆದರೆ ಆ ಸಾಲಗಳನ್ನು ಜನತೆಯ ಕೈಗೆ ಕೊಡಬೇಡಿರಿ, ಆಫೀಸರ ಕೈಯಲ್ಲಿ ಕೊಟ್ಟು ಕೆಲಸ ಮಾಡಿಸಿರಿ, ಅವರಿಗೆಲ್ಲಾ ನೀರು ಕೊಡಿಸಿರಿ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಇನ್ನು ರೋಡ್ಸ್ ವಿಷಯ ಹೇಳುವುದಾದರೆ ಬಂಡಿಂಗ್ ಕೆಲಸ ಮತ್ತು ಬಾವಿ ಕೆಲಸಕ್ಕೆ ಸರ್ಕಾರ ಕೊಟ್ಟ ಹಣವನ್ನು ಫ್ರೀ ಅಂಥ ಮಾಡಿರಿ. ಸ್ಕೇರ್ಸಿಟಿ ಒಳಗಿರುವ 63 ಕೋಟಿ ರೂಪಾಯಿ ಹಣದಲ್ಲಿ ಏನು ಖರ್ಚು ಮಾಡಿದರೂ ಕೂಡ ಸ್ಕೇರ್ಸಿಟಿ ಏನೂ ಕಡಿಮೆ ಆಗಲಿಲ್ಲ. ಟಿ. ಡಿ. ಬಿ. ರೋಡ್ಸ್‌ಗಳಿಗಾಗಲಿ ಅಥವಾ ಪಿ. ಡಬ್ಲ್ಯು. ಡಿ. ರೋಡ್ಸ್‌ಗಳಿಗಾಗಲೀ ಈವಾಗ ಏನು ಹಣ ಖರ್ಚು ಮಾಡಿದ್ದೀರಿ ಅದನ್ನು ಸ್ಕೇರ್ಸಿಟಿ ಹಣದಲ್ಲಿ ಮಾಡಿಸಿದ್ದೀರಿ. ಅದಕ್ಕೆ ಖರ್ಚು ಮಾಡಿದ ಹಣವನ್ನು ಬೇವರ್ಸಿ ಹಣ ಎಂದು ಹೇಳುವ ಬದಲು ಸಾರ್ವಜನಿಕರ ಹಣ ಅಥವಾ ಇಂಥಾ ಹಣ ಎಂದು ಏತಕ್ಕೆ ಹೆಸರು ಹೇಳಬಾರದು ? ಮಾನ್ಯ ದಯಾನಂದ ಸಾಗರ್‌ರವರು ಒಂದು ಮಾತು ಹೇಳಿದರು. ಅದು ಏನೆಂದರೆ ವಿಶ್ವಾಮಿತ್ರ ತಪಸ್ಸು ಮಾಡುತ್ತಿದ್ದ ಮೇನಕೆ ಬಂದಳು, ಶಕುಂತಲೆ ಹುಟ್ಟಿದಳು. ಕಾವೆಲ್ಲ ಆರಿದ ಮೇಲೆ, ವಿಶ್ವಾಮಿತ್ರ ಶಕುಂತಲೆ ತನ್ನ ಮಗಳಲ್ಲ ಅಂದ ಎಂದು. ಆ ರೀತಿ ವಿಶ್ವಾಮಿತ್ರ ಶಕುಂತಲೆ ಸಂಬಂಧದಂತೆ ನಿಮ್ಮ ವರ್ತನೆ ನೋಡಿ. ಆದುದರಿಂದ ನೀವು ಖರ್ಚು ಮಾಡುವ ಹಣ ಬೇವರ್ಸಿ ಹಣ ಎಂದು ಹೇಳಬೇಡಿ. ಯಾವ ಸರ್ಕಾರ ಬಂದರೂ ಕೂಡ ಟ್ಯಾಕ್ಸ್ ಹಾಕದೆ ಹೋದರೆ ಸರ್ಕಾರಿ ಕೆಲಸ ಹೇಗೆ ನಡೆಯುತ್ತದೆ. ಯೋಗ್ಯ ಕೆಲಸಕ್ಕೆ ಟ್ಯಾಕ್ಸ್ ಹಾಕಿ, ಯೋಗ್ಯ ಕೆಲಸಕ್ಕೆ ಉಪಯೋಗಿಸಿ ಬೇಡ ಅನ್ನುವುದಿಲ್ಲ.

(ಶ್ರೀ ಎಸ್ ವೈ. ಪಾಟೀಲ್)

ಈಗ ಹೆಚ್ಚು ಸಂಖ್ಯೆಯಲ್ಲಿ ಮಂತ್ರಿಗಳಾಗಿದ್ದೀರಿ, ಆದ್ದರಿಂದ ಖರ್ಚು ಜಾಸ್ತಿಯಾಗುತ್ತಾ ಇದೆ, ಅದನ್ನು ಕಡಿಮೆ ಮಾಡಿರಿ ಎಂದು ಹೇಳುತ್ತೇನೆ.

ಇನ್ನು ನಮ್ಮ ಸಿಂದಗಿ ಮತ್ತು ಇಂಡಗಿ ತಾಲ್ಲೂಕಿನ ಜನರ ವಿಚಾರ ಹೇಳುವುದಾದರೆ ಅವರು ಯಾವ ಕೆಲಸಕ್ಕೇ ಆಗಲಿ ನಿಮ್ಮನ್ನು ಕೇಳುವುದಕ್ಕೆ ಬರುವುದಿಲ್ಲ. ಏತಕ್ಕೆಂದರೆ ನಿಮ್ಮನ್ನು ನಾವು ಆರಿಸಿ ಕಳುಹಿಸಿದ್ದೇವೆಲ್ಲಾ, ನಮ್ಮ ಕ್ಷೇತ್ರದ ಕೆಲಸ ಮಾಡಿಕೊಡು ಎಂದು ನಮ್ಮ ಹತ್ತಿರ ಬಂದು ಕೇಳುತ್ತಾರೆ. ನಮ್ಮ ಪರಿಸ್ಥಿತಿ ಹೀಗಿರುವುದರಿಂದ ನಾವು ನಿಮಗೆ ಈ ಮಾತುಗಳನ್ನು ಹೇಳಬೇಕಾಗಿದೆ.

ಇನ್ನು ಹರಿಜನರ ಬಗ್ಗೆ ಹೇಳುವುದಾದರೆ ಅವರವರಲ್ಲೇ ಅವನು ಎಡಗೈ, ಇವನು ಬಲಗೈ ಎಂದು ಜಗಳವಾಡುತ್ತಿರುತ್ತಾರೆ, ಅವರವರಲ್ಲೇ ಏಕಮತ ಇಲ್ಲ, ಆದುದರಿಂದ ನಾನು ಹೇಳುವುದು ಏನೆಂದರೆ ಅವರಲ್ಲಿ ಒಂದು ಏಕಮತೆಯನ್ನುಂಟು ಮಾಡಲು ಅವರಿಗೆ ಬೇರೆ ಬೇರೆ ಗೃಹಕೈಗಾರಿಕೆಗಳನ್ನು ಮನೆಗಳಲ್ಲಿ ತೆರೆಯಲು ಅವರಿಗೆ ಈ ಕೈಗಾರಿಕೆಗಳಲ್ಲಿ ಉತ್ತೇಜನ ಕೊಟ್ಟು ಒಳ್ಳೆಯ ಅನುಕೂಲತೆಗಳನ್ನು ಮಾಡಿಕೊಡಿ ಎಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ ಅದು ಏನೆಂದರೆ ಈಗ 15 ಸಾವಿರ ಬಾವಿಗಳನ್ನು ಏನು ತೋಡಿಸಿದ್ದೀರೋ ಅದರಲ್ಲಿ ಎಷ್ಟೋ ಬಾವಿಗಳಲ್ಲಿ ನೀರು ಇಲ್ಲ ಎಷ್ಟು ಬಾವಿಗಳಲ್ಲಿ ನೀರು ನಿಲ್ಲುತ್ತದೆ ಅಷ್ಟು ಬಾವಿಗಳಿಗೆ ದುಡ್ಡು ಕೊಟ್ಟು ಬಾವಿಗಳನ್ನು ತೆಗೆಸಿ ನೀರು ನಿಲ್ಲುವ ಹಾಗೆ ಮಾಡಿಕೊಡಿ ಎಂದು ಹೇಳುತ್ತೇನೆ.

ಇನ್ನು ಮನೆ ಕಟ್ಟಿಸುವುದಕ್ಕೆ ಲೋನ್ ಕೊಡುತ್ತೀರಿ. ಆ ಲೋನ್‌ಗೆ ಸ್ಟೈನ್ ತೆಗೆದುಕೊಳ್ಳುತ್ತೀರಿ. ಆದರೆ ಅದರಿಂದ ಏನೂ ಉಪಯೋಗವಾಗುತ್ತಾ ಇಲ್ಲ. ಅಷ್ಟು ಮಾತ್ರ ಹೇಳುತ್ತೇನೆ.

ಇನ್ನು ಮನೆಯಿಲ್ಲದೇ ಇರುವವರಿಗೆ ನಿವೇಶನವನ್ನು ಕೊಡುತ್ತೇವೆ ಎಂದು ಹೇಳುತ್ತೀರಿ. ಆದರೆ ಆ ನಿವೇಶನಗಳು ಯಾರಿಗೆ ಸಿಕ್ಕುತ್ತದೆ ಎಂದರೆ ಅನುಕೂಲಸ್ಥರಿಗೆ ಸಿಕ್ಕುತ್ತದೇ ವಿನಾ ನಿಜವಾಗಿ ಬಡವರಿಗೆ ಸಿಕ್ಕುವುದಿಲ್ಲ. ಇವಾಗ ನಮ್ಮವರು ಗೋವಾಕ್ಕೆ ಮತ್ತು ಅಕ್ಕಪಕ್ಕದ ಸ್ಥಳಗಳಿಗೆ ಹೋದವರು ಅಲ್ಲೇ ಇದ್ದಾರೆ. ಎಷ್ಟು ಜನ ಇಲ್ಲಿಗೆ ಬಂದಿದ್ದಾರೆ ಹೇಳಿ, ಅವರು ಯಾರೂ ಇಲ್ಲಿಗೆ

ಬರುತ್ತಾ ಇಲ್ಲ. ಏತಕ್ಕೆಂದರೆ ಎಲ್ಲಾ ಅನುಕೂಲತೆಗಳೂ ಅಲ್ಲೇ ಇರುವುದರಿಂದ ಅಲ್ಲೇ ಇದ್ದುಬಿಟ್ಟಿದ್ದಾರೆ. ನೀವು ಅವರಿಗೆ ಇಲ್ಲೇ ಸರಿಯಾದ ಅನುಕೂಲತೆಗಳನ್ನು ಮಾಡಿಕೊಟ್ಟರೆ ಅವರು ಏತಕ್ಕೆ ಅಲ್ಲಿಗೆ ಹೋಗುತ್ತಾರೆ ?

ಇನ್ನೊಂದು ವಿಷಯ ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಶ್ರೀಮಾನ್ ಚನ್ನಬಸಪ್ಪನವರು ಹೊಸದಾಗಿ ಮಿನಿಸ್ಟರ್ ಆಗುವ ಕಾಲದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರ ಹತ್ತಿರ ಬಂದಿದ್ದರು. ಅವಾಗ ನಮ್ಮ ಕಡೆಯಲ್ಲಿ ಒಂದು ಚಂದನಕೋಟೆ ಬ್ರಿಡ್ಜನ್ನು ಮಾಡಿಸಿಕೊಡಬೇಕು ಎಂದು ಹೇಳಿದ್ದೆ. ಆ ಕೆಲಸ ಈವೊತ್ತಿನವರೆಗೂ ಅವರ ಕೈಯಲ್ಲಿ ಆಗಲಿಲ್ಲ. ಅಲ್ಲಿ ಕಲ್ಲು ಹೊಡೀತ್ತಾರೆಂದು ನಾನು ಆಜಾಗಕ್ಕೇ ಹೋಗಿಲ್ಲ. ಆದುದರಿಂದ ಸರ್ಕಾರದವರು ಆ ಚಂದನಕೋಟೆ ಬ್ರಿಡ್ಜನ್ನು ಕೂಡಲೆ ಮಾಡಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಕಡೆಯದಾಗಿ ಒಂದು ಮಾತು : ರಾಜ್ಯದಲ್ಲಿರತಕ್ಕ ದೇವಸ್ಥಾನಗಳ ಬಗ್ಗೆ ಒಂದು ಸರ್ವೆ ಮಾಡಿಸಬೇಕಾಗಿದೆ. ನಮ್ಮಲ್ಲಿ ಹಿಪ್ಪರಿಗಿ ಅನ್ನತಕ್ಕ ದೇವಸ್ಥಾನಕ್ಕೆ ವರ್ಷಕ್ಕೆ ಹತ್ತು ಸಾವಿರ ರೂಪಾಯಿಗಳ ಮೇಲೆ ವರಮಾನವಿದೆ. ಆ ದೇವಸ್ಥಾನವನ್ನು ಹಿಂದಿದ್ದ ಮಾನ್ಯ ಮಂತ್ರಿಗಳಾದ ಅಜೀಜ್ ಸೇಟರವರು ಒಂದು ಪಿಲಿಗ್ರಿಂ ಸೆಂಟರನ್ನಾಗಿ ಮಾಡುವುದಾಗಿ ಹೇಳಿದ್ದರು. ಆದರೆ ಅದೇನು ಕಾರಣವೋ ಆದರ ಬಗ್ಗೆ ಅವರು ಕಾರ್ಯಕ್ರಮಗಳನ್ನು ಕೈಗೊಳ್ಳಲಿಲ್ಲ. ಆ ದೇವಸ್ಥಾನಕ್ಕೆ ಅನುಕೂಲಗಳನ್ನು ಹೆಚ್ಚಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಆದರೆ ಆ ಸಿಂದಗಿ ಮತ್ತು ಇಂಡಿಗಿ ತಾಲ್ಲೂಕಾಗಳಿಗೆ ಇರಿಗೇಷನ್‌ಗಳ ಅನುಕೂಲ ಕಲ್ಪಿಸಿಕೊಡದಿದ್ದರೆ ಮುಂದೇನಾಗುತ್ತದೆಂಬುದನ್ನು ನಾನು ಈಗ ಹೇಳಲಾರೆ. ಅದಕ್ಕೆ ಅವಕಾಶ ಕೊಡದಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†SRI K. ABDUL SUBHAN (Tumkur):—Esteemed Madam Speaker, I consider it my profound duty to offer thanks to you for having given me an opportunity to participate in the deliberations on the Motion of Thanks to the Governor's Address. While seconding the Governor's Address, I wish to make a few suggestions.

(SRI K. ABDUL SUBHAN)

A reference has been made in the Governor's Address regarding the renaming of the State as Karnataka. I would like to go back to the days prior to Independence. It was a commitment of our Party that after obtaining Independence we are going to reorganise the States on a linguistic basis. After obtaining Independence during the year 1947, a Commission was constituted under the name States Reorganisation Commission headed by the late Sri Fazl Ali and the verdict of the Commission came into force during the year 1956. But due to political motives and prejudices all the recommendations were not implemented. Those in power have an impression that they will continue in power till their life or they conduct themselves in such a way that they will continue in power for ever. So the reorganisation recommendations were not implemented in full. So, recently during the General Elections of 1972, a mandate was given to us that the Old Mysore State should be renamed as Karnataka. So under the dynamic leadership of our beloved Chief Minister Sri D. Devaraj Urs this question was finalised and a bold decision was taken by our party and the Government under the guidance of Sri Devaraj Urs, to rename the State as Karnataka I am of the opinion that this renaming of the Old Mysore State as Karnataka remains as a monument in history for ever. With these few seconds of rejoicing, now I am diverting to a phase of sorrow and suffering in the form of hike of prices and dislocation of law and order situation.

Madam Speaker, ever since Independence we had the fear of forein aggression. We had foreign aggression during the year 1962 by our neighbour China and during the year 1967 we had one more aggression from Pakistan. Ultimately we defeated it during the year 1970. Victory over Pakistan was due to the dynamic and unchallenged leadership of our beloved Prime Minister Smt. Indira

Gandhi and as a result of it Independent Bangla Desh came into existence. So, the psychological feat that was dominating in the mind of the citizens of India has been eradicated and the aggressor has been thrown out. We have taken about 25 years after Independence to eradicate that psychological fear. So, the slogan of 'Jai Jawan" of our beloved late Prime Minister Sri Lal Bahadur Shastriji has been fulfilled. By passing the Land Reforms Act another slogan of late Sri Shastriji has been fulfilled, which is a big step in the direction socio-economic revolution. "Jai Jawan" means: Victory of the soldier is the victory of our nation. "Jai Kisan" means victory of farmers. So, the cherished ideal of victory of our nation and victory of farmers. has been fulfilled. Our esteemed Leader of the Opposition and some others in the Opposition have cultivated a habit of saying in season and out of season that Congress is known for raising slogans. But the examples I have given prove that we have converted slogans into realities.

Immediately there after, our nation faced one more problem in the form of soaring prices. Our nation faced peril in the form of internal subversiveness, frustration and disgruntlement, unrest and agitation. In my personal opinion the reasons for them are as follows: Wrong strategy of taxation that is prevailing, vested interests and a few capitalists who are indulging in black-marketing and making profits, and to a lesser degree political motivation; a few opposition parties and capitalist nations of the world. A bold step has been taken by our energetic Union Finance Minister in altering the strategy of taxation; formerly the imperialistic method of preparing budgets was indulged in because we were slaves for a period of 900 years prior to Independence. A person who shows an income of Rs. 1 lakh is eligible to get Rs. $2\frac{1}{2}$ thousand as profit: whereas if you want to make a profit of Rs. 1 lakh, you have to invest some crores. Due to the wrong strategy of

(SRI K. ABDUL SUBHAN)

taxation, businessmen have resorted to the maintenance of double accounts. That is how there is a parallel economy in the form of black money. According to Wanchoo's Report, the black money that is in circulation is Rs. 10,000 millions. Just to convert this black money into white money, the mercantile community used to hoard essential commodities. Whenever they hoard essential commodities, naturally they become scarce in the country and it will create panic in the common man; naturally prices go up. Just to avoid this, our Union Finance Minister Sri Y. B. Chavan has taken a bold step and a welcome gap for taxing incomes has been provided in our Budget.

If a man shows an income of one lakh, he is eligible for 22,000 in the form of white money. When it is the tendency of the mercantile community that they would not like to keep their money idle, it always leads to further investment which will generate new incomes for the nation. Hence, such a gap has been provided in the Budget. Naturally, such a man will go in for more industries, he would start more industries, naturally there will be more production of essential commodities and there will be more business activity. When essential commodities are coming more and more into the market, naturally prices will come down. So, I want to extend my congratulation through you Mr. Speaker, to the Finance Minister Mr. Chavan for the bold steps he has taken to implement the first state of WANCHOO'S Report. If more and more industries are started, there will be more and more scope for employment.

I have about 30 points listed with me. It requires more time. I shall try to cover as many points as possible.

The frustration that is prevailing among the youth of the country regarding unemployment, that can be

easily removed by providing more and more employment opportunities.

Forest: It is a well-known fact that forests act as a great power for drawing more rains. I want to narrate a brief record on this. The universal average forest in other countries is 33 & 3/1 per cent, whereas our national average is 25--our State average is 18 per cent. I am extremely sorry to mention that I am hailing from a district whose average is only 11 per cent. In the face of this low percentage of forest, we cannot except any more rain and in the absence of rains, we cannot have any more of agricultural production. In this House, the Hon. Minister for Public Works said the other day that the rain-fed area in Malnad is the lowest. Within the last five years, rainfall in that area has gone down to 100 inches. If the same continues for 100 years, then malnad area will be converted into maidan, and maidan into desert, because there is not enough rainfall in Tumkur, Chitaldurg and Kolar districts and I think they are going to be converted into a desert within the next 100 years.

I will now swith over to major irrigation. It is a well established fact that humanity is using negligible percentage of rain-fall roughly about 5 per cent. The rest of it is flowing into the oceans. Mo e improvement in major irrigation will help to enhance the use of water by humanity. By constructing more dams, we can impound more water and we can use more water and we can convert the barren land into wet land. Naturally the water table will be raised. By installing lift irrigation pumps, some more barren land could be converted into fertile land. Another by-product of construction of major dams is, we can produce more electricity by installing necessary generators. By enhancing the electric power, we can enhance our industries and industrial out put. When we increase our industries, we can provide more and more employment and we can solve the unemployment

(SRI ABDUL SUBHAN)
problem. By thls the frustration that is prevailing among the unemployed youth, can be easily solved.

IRRIGATION: Our Government prior to Independence we had only one Dam--the KRS. After Independence, we have already constructed the Lakkavalli, Tungabhadra, so many irrigation projects. By the end of the Fourth Plan, we will be able to complete the Malaprabha, Ghataprabha, Upper Krishna and Hemavathi and others. I have already said that I hail from a district where the rainfall has come down. To compensate for the loss in agriculture, I urge upon the Government to start more and more industries in that area. I say that industries should not be concentrated in one area. They should be decentralised and I suggest that Tumkur should be developed into a satallite town of Bangalore. That is one way of compensating the loss which we people of that area has undergone by this kind of deforestation.

Regarding Education, as I have already said, we were slaves for over 900 years and we were held under subjulation by foreign rulers either from Central Asia or from UK, the Britishers. So it was imperialistic oriented education that was in force till now and that was forced upon us. A reform of that educational system is badly needed and our Government has taken active steps to introduce this subject. Formerly, only a few educational institutions used to administer the entir educational system. Now that power has been decentralised and private institutions have been encouraged. But in the constitution of betterment committees, the common man is also eligible to be placed in these committees and he may also propose rules and regulations. So that in the higher strata of educational society, we have given a sort of autonomy and we want to extend this autonomy to the lower strata of educational society, that is primary education. Recently the betterment committees have been constituted and Government have accepted monetary and

material donations from them. The sole purpose of accepting monetary and material benefit is not that our Government is taking away wealth from the people.

With this I close my speech and I offer my sincere thanks to the speaker for having given me an opportunity to speak in this august House.

MADAM SPEAKER.—The House will now adjourn to meet at 1-00 P. M. tomorrow.

The House adjourned at Six of the Clock to meet at One of the Clock on Tuesday the 5th March 1974.

WD – 37 – GBPC—550—13-8-74.